# ಹಂಪಿ ಟೈಮ್ಸ್
HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY








ಸಂಪುಟ:01 • ಸಂಚಿಕೆ:322 • ನೋಂದಣಿ ನಂ.:KARKAN27911 • ವಿಜಯನಗರ • 24.05.2024 • ಶುಕ್ರವಾರ • ಪುಟ:04 • ಬೆಲೆ:2
Volume:01 • Issue:322 • Reg.No:KARKAN27911 • VIJAYANAGARA • 24.05.2024 • Friday • Page:04 • Rs:2


## ಶ್ರೀವಡಕರಾಯ ರಥೋತ್ಸವ ಅದ್ದೂರಿ

### ಹೊಸಪೇಟೆಯಲ್ಲಿ ತೇರು ಎಳೆದ ಭಕ್ತರು । ಮುಗಿಲು ಮುಟ್ಟಿದ ಜಯಘೋಷಗಳು



■ ಹಂಪಿ ಟೈಮ್ಸ್ ಹೊಸಪೇಟೆ

ನಗರದ ಮೇನ್ ಬಜಾರನಲ್ಲಿರುವ ಶ್ರೀ ವಡಕರಾಯಸ್ವಾಮಿ ಮತ್ತು ಶ್ರೀ ರಂಗನಾಥ ಸ್ವಾಮಿಯ ರಥೋತ್ಸವ ಗುರುವಾರ ಸಂಜೆ ಜಯಘೋಷಗಳೊಂದಿಗೆ ವಿಜೃಂಭಣೆಯಿಂದ ಜರುಗಿತು. ಶ್ರೀ ವಡಕರಾಯ ದೇವಸ್ಥಾನದಿಂದ ಉತ್ತರಕ್ಕಿರುವ ಶ್ರೀ ಪಾದಗಟ್ಟೆ ಆಂಜನೇಯಸ್ವಾಮಿ ದೇವಸ್ಥಾನದ ವರೆಗೆ ಭಕ್ತರು ತೇರು ಎಳೆದರು. ಭಕ್ತರು ಹೂ ಹಣ್ಣು ಸಮರ್ಪಿಸಿ ಭಕ್ತಿಯಿಂದ ನಮಿಸಿದರು. ಬೆಳಿಗ್ಗೆ ದೇಗುಲದಲ್ಲಿ ಶ್ರೀಸ್ವಾಮಿಗೆ ಅಭಿಷೇಕ, ವಿಶೇಷ ಪೂಜೆ ನೆರವೇರಿಸಲಾಯಿತು. ಭಕ್ತರು ಸ್ವಾಮಿಗೆ ಹಣ್ಣುಕಾಯಿ ನೈವೇದ್ಯ ಸಲ್ಲಿಸಿ ದರ್ಶನ ಪಡೆದರು. ಧಾರ್ಮಿಕ ದತ್ತಿ ಇಲಾಖೆಯ ದೇವಸ್ಥಾನದ ಅಧಿಕಾರಿಗಳು, ದೇವಸ್ಥಾನದ ಅರ್ಚಕರು, ಮುಖಂಡರು ಸೇರಿದಂತೆ ಅಪಾರ ಸಂಖ್ಯೆಯಲ್ಲಿ ಭಕ್ತರು ರಥೋತ್ಸವದಲ್ಲಿ ಪಾಲ್ಗೊಂಡಿದ್ದರು.

**ಮೈಕ್ರೋ ನ್ಯೂಸ್**


ಮಕ್ಕಳ ಜ್ಞಾನ ವಿಕಾಸಕ್ಕೆ
ಮನೆಗೊಂದು ಕನ್ನಡ ದಿನಪತ್ರಿಕೆ ಇರಲಿ


## ಉರಗ ರಕ್ಷಕರಿಗಾಗಿ ಒಂದು ದಿನದ ಕಾರ್ಯಗಾರ

**ಹಂಪಿ ಟೈಮ್ಸ್ ಹೊಸಪೇಟೆ**

ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಯಲ್ಲಿ ಜನವಸತಿ ಪ್ರದೇಶದಿಂದ ಹಾವುಗಳನ್ನು ರಕ್ಷಿಸುತ್ತಿರುವ ವ್ಯಕ್ತಿಗಳನ್ನು ಗುರುತಿಸಿ ಅವರಿಗೆ ಒಂದು ದಿನದ ತರಬೇತಿ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ ಎಂದು ಬಳ್ಳಾರಿ ಜಿಲ್ಲಾ ಪ್ರಾದೇಶಿಕ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಸಂದೀಪ್ ಹೆಚ್. ಸೂರ್ಯವಂಶಿ ತಿಳಿಸಿದ್ದಾರೆ.

ಅವಿಭಜಿತ ಬಳ್ಳಾರಿ ಜಿಲ್ಲೆಯಲ್ಲಿ ಅನೇಕ ಜನರು ಸ್ವಯಂ ಸ್ಫೂರ್ತಿಯಿಂದ ಜನವಸತಿ ಪ್ರದೇಶದಿಂದ ಉರಗಗಳನ್ನು ಸಂರಕ್ಷಿಸಿ ಅವುಗಳನ್ನು ಕಾಡಿಗೆ ಬಿಡುತ್ತಿದ್ದಾರೆ. ಆದರೆ, ಜಿಲ್ಲೆಯಲ್ಲಿರುವ ಉರಗ ರಕ್ಷಕ (ಸ್ನೇಕ್ ರೆಸ್ಕ್ಯೂಆರ್) ರ ಸಮಗ್ರ ಮಾಹಿತಿ ಇರುವುದಿಲ್ಲ. ಆದ್ದರಿಂದ ಅವಿಭಜಿತ ಬಳ್ಳಾರಿ ಜಿಲ್ಲೆಯಲ್ಲಿ ಈಗಾಗಲೇ ಸ್ವಯಂ ಪ್ರೇರಣೆಯಿಂದ ಉರಗ ರಕ್ಷಣಾ ಕಾರ್ಯದಲ್ಲಿ ತೊಡಗಿರುವ ವ್ಯಕ್ತಿಗಳನ್ನು ಒಂದೆಡೆ ಸೇರಿಸಿ ಅವರಿಗೆ ಹಿರಿಯ ಉರಗ ತಜ್ಞರು ಹಾಗೂ ವೈದ್ಯರಿಂದ ತರಬೇತಿ ನೀಡಿ ಪ್ರಮಾಣಪತ್ರಗಳನ್ನು ವಿತರಿಸಲಾಗುವುದು. ಈ ಅಧಿಕೃತ ಮಾನ್ಯತೆ ಪಡೆದವರು ಮಾತ್ರ ಜನವಸತಿ ಪ್ರದೇಶದಿಂದ ಹಾವುಗಳನ್ನು ಹಿಡಿದು ಬಿಡುಗಡೆ ಮಾಡಲು ಅವಕಾಶವಿರುತ್ತದೆ. ಈ ಕುರಿತು ಒಂದು ದಿನದ ಕಾರ್ಯಾಗಾರವನ್ನು ಮೇ 28ರಂದು ಬಳ್ಳಾರಿಯಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದು, ಈಗಾಗಲೇ ಉರಗ ರಕ್ಷಣಾ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಯ ಎಲ್ಲಾ ಉರಗ ರಕ್ಷಕರು ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕೆಂದು ಸಂದೀಪ್ ಸೂರ್ಯವಂಶಿ ಅವರು ಕೋರಿದ್ದಾರೆ. ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಲು ಬಳ್ಳಾರಿ ವಲಯ ಅರಣ್ಯಾಧಿಕಾರಿಗಳು ದೂರವಾಣಿ ಸಂಖ್ಯೆ: 7760534653 ಹಾಗೂ ಉಪವಲಯ ಅರಣ್ಯಾಧಿಕಾರಿ ಮೊ: 9886991202, ಸಂಪರ್ಕಿಸಬಹುದು ಅಥವಾ ತಮ್ಮ ಸ್ವವಿವರವನ್ನು **dcfbellaryt@gmail.com** ಈ-ಮೇಲ್‌ಗೆ ಕಳುಹಿಸಬಹುದು ಎಂದು ಅವರು ತಿಳಿಸಿದ್ದಾರೆ.

## ನಿಲ್ಲದ ಡೊನೇಷನ್ ಹಾವಳಿ

### ಅನುಮಾನ ಹುಟ್ಟಿಸಿದ ಅಧಿಕಾರಿಗಳ ಮೌನ

### ಎಸ್.ಎಫ್.ಐ. – ಡಿ.ವೈ.ಎಫ್.ಐ. ಸಂಘಟನೆಗಳಿಂದ ಆರೋಪ



■ **ಹಂಪಿ ಟೈಮ್ಸ್ ಹೊಸಪೇಟೆ**

ಶೈಕ್ಷಣಿಕ ವರ್ಷ ಆರಂಭವಾಗುತ್ತಿದ್ದಂತೆ ಎಲ್.ಎಫ್.ಎಸ್., ಚೈತನ್ಯ ಟೆಕ್ನೋ ಸೇರಿದಂತೆ ಕೆಲ ಖಾಸಗಿ ಶಾಲೆಗಳು ಸರ್ಕಾರದ ಆದೇಶಗಳನ್ನು ಗಾಳಿಗೆ ತೂರಿ ಮನಸೋಇಚ್ಛೆ ಡೊನೇಷನ್, ಫೀ ವಸೂಲಿ ಮಾಡುತ್ತಿವೆ ಎಂದು ಆರೋಪಿಸಿದ ಎಸ್.ಎಫ್.ಐ. ಮತ್ತು ಡಿ.ವೈ.ಎಫ್.ಐ. ಸಂಘಟನೆಯ ಪದಾಧಿಕಾರಿಗಳು, ಸರ್ಕಾರದ ನಿಯಮ ಪಾಲಿಸದ ಶಾಲೆಗಳ ಮೇಲೆ ಕೂಡಲೆ ಕ್ರಮಕೈಗೊಳ್ಳಬೇಕೆಂದು ಒತ್ತಾಯಿಸಿ ಕ್ಷೇತ್ರ ಶಿಕ್ಷಣಾಧಿಕಾರಿಗೆ ಗುರುವಾರ ಮನವಿ ಸಲ್ಲಿಸಿ ಆಗ್ರಹಿಸಿದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಈಡಿಗರ ಮಂಜುನಾಥ ಮಾತನಾಡಿ, ಪ್ರತಿ ವರ್ಷ ಮನವಿ ಸ್ವೀಕರಿಸುತ್ತಿರುವ ಶಿಕ್ಷಣ ಇಲಾಖಾಧಿಕಾರಿಗಳು ಯಾವುದೇ ಯಾವ ಶಾಲೆಯ ಮೇಲೂ ಕ್ರಮಕೈಗೊಳ್ಳದಿರುವುದು ಅನೇಕ ಅನುಮಾನಗಳನ್ನು ಹುಟ್ಟು ಹಾಕುತ್ತಿವೆ. ಡೊನೇಷನ್ ಪಡೆದ ಖಾಸಗಿ ಶಾಲೆಗಳ ಮೇಲೆ ಸೂಕ್ತ ಕ್ರಮಕೈಗೊಂಡು ಡೊನೇಷನ್ ಹಾವಳಿ ತಡೆಯಬೇಕು. ಈಗಾಗಲೇ ಶಾಲೆಗಳು ಈ ವರ್ಷದ ಶೈಕ್ಷಣಿಕ ಅವಧಿಗೆ ಪ್ರವೇಶಾತಿಯನ್ನು ಪ್ರಾರಂಭಿಸಿವೆ. ಸರ್ಕಾರದ ಆದೇಶಗಳನ್ನು ಪಾಲಿಸದೇ, ಶಾಲಾ ಆಡಳಿತ ಮಂಡಳಿ ತಮ್ಮದೇ ನೀತಿಯನ್ನು ರೂಪಿಸಿಕೊಂಡಿವೆ. ಹಾಗೂ ಪಠ್ಯಪುಸ್ತಕಗಳು ಹಾಗೂ ಶಾಲಾ ಸಮವಸ್ತ್ರಗಳ ವಿತರಣೆಯಲ್ಲಿ ಆಡಳಿತ ಮಂಡಳಿ ಮತ್ತು ಅಂಗಡಿಯ >>3

## ಶರನಂ ಆಸ್ಪತ್ರೆ ಲೈಸನ್ಸ್ ರದ್ದು

### ಕಾಯ್ದೆ ಉಲ್ಲಂಘನೆ, ಬಾಲಕನ ಸಾವು, ನಿರ್ಲಕ್ಷ್ಯತನ

■ **ಹಂಪಿ ಟೈಮ್ಸ್ ಹೊಸಪೇಟೆ**





ನಗರದ ಅಮರಾವತಿಯಲ್ಲಿರುವ ಶರನಂ ಆಸ್ಪತ್ರೆ ಕೆಪಿಎಂಇ ಕಾಯ್ದೆಯ ಉಲ್ಲಂಘನೆ ಮತ್ತು ಇತ್ತೀಚೆಗೆ ಬಾಲಕನೋರ್ವ ಸಾವಿಗೀಡಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಚಿಕಿತ್ಸೆ ನೀಡುವಲ್ಲಿ ಅವರ ದಿವ್ಯ ನಿರ್ಲಕ್ಷ್ಯತನ ತೋರಿರುವುದು ಮೇಲ್ನೋಟಕ್ಕೆ ಕಂಡು ಬಂದಿರುವ ವರದಿ ಹಿನ್ನಲೆಯಲ್ಲಿ ಆಸ್ಪತ್ರೆಯ ಲೈಸನ್ಸ್‌ನ್ನು ತಾತ್ಕಾಲಿಕವಾಗಿ ರದ್ದುಗೊಳಿಸಲಾಗಿದೆ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ತಿಳಿಸಿದ್ದಾರೆ.

ಬಾಲಕನ ಸಾವಿನ ಕುರಿತು ಎಫ್‌ಐಆರ್ ದಾಖಲಾಗಿದ್ದು, ಕೊಪ್ಪಳ ವೈದ್ಯರ ತಂಡದಿಂದ ಸಾವಿನ ತನಿಖೆ ನಡೆಯುತ್ತಿದೆ. ವೈದ್ಯರ ಮತ್ತು ಪೊಲೀಸರ ವರದಿ ಆಧರಿಸಿ ಮುಂದಿನ ಕ್ರಮಕೈಗೊಳ್ಳಲಾಗುವುದು. ಮುಂದಿನ ಸೂಚನೆವರೆಗೆ ಆಸ್ಪತ್ರೆಯನ್ನು ಮುಚ್ಚುವಂತೆ ಸೂಚಿಸಲಾಗಿದೆ ಎಂದು ತಿಳಿಸಿದ್ದಾರೆ. ಆರೋಗ್ಯ ಇಲಾಖೆ ತಾಲೂಕು ವೈದ್ಯಾಧಿಕಾರಿ ಡಿ.ಭಾಸ್ಕರ ಮತ್ತು ತಂಡ ಶರನಂ ಆಸ್ಪತ್ರೆಗೆ ಗುರುವಾರ ಸಂಜೆ ತೆರಳಿ ಆಸ್ಪತ್ರೆ ತೆರೆಯದಂತೆ ಆಸ್ಪತ್ರೆಯ ವೈದ್ಯರಿಗೆ ನೋಟಿಸ್ ನೀಡಿದ್ದಾರೆ. ಈ ಸಂದರ್ಭದಲ್ಲಿ ಆರೋಗ್ಯ ಇಲಾಖೆಯ ದೊಡ್ಡಮನಿ, ಎಂ.ಧರ್ಮನಗೌಡ ಇದ್ದರು.




## ಬೆಳಕಿನ ಹಾದಿ

# ಹೊಂದಾಣಿಕೆಯ ಗುಣ

■ ಆರ್.ಬಿ.ಗುರುಬಸವರಾಜ



ಒಂದು ದಿನ ಮಗನೊಬ್ಬ ತನ್ನ ಸಮಸ್ಯೆಗಳ ಬಗ್ಗೆ ತಂದೆಯೊಂದಿಗೆ ಹೇಳುತ್ತಾ ಅಳತೊಡಗಿದ. ಯಾರೊಂದಿಗೆ ಹೇಗೆ ಮಾತನಾಡಬೇಕು? ಯಾವ ಸಂದರ್ಭದಲ್ಲಿ ಹೇಗೆ ವರ್ತಿಸಬೇಕು? ಎಂಬುದು ಅವನಿಗೆ ಸಮಸ್ಯೆಯಾಗಿತ್ತು. ಇದರಿಂದ ಅವನು ಏನೇನೋ ಮಾತನಾಡಿ ಎಲ್ಲರಿಂದ ಬೈಸಿಕೊಳ್ಳುತ್ತಿದ್ದ.

ಅವನ ತಂದೆ ಎಲ್ಲವನ್ನೂ ತಾಳ್ಮೆಯಿಂದ ಆಲಿಸಿದರು. ಅವನ ಸಮಸ್ಯೆಗೆ ಅವನೇ ಪರಿಹಾರ ಕಂಡುಕೊಳ್ಳುವಂತೆ ಒಂದು ಉಪಾಯ ಹೂಡಿದರು. ಅಡುಗೆ ಮನೆಗೆ ಹೋಗಿ ಎರಡು ಆಲೂಗಡ್ಡೆ, ಎರಡು ಮೊಟ್ಟೆ ಮತ್ತು ಒಂದು ಬೊಗಸೆಯಷ್ಟು ಹೆಸರು ಕಾಳು ತಂದರು. ಅವುಗಳನ್ನು ಮಗನಿಗೆ ನೀಡಿದರು. ಅವುಗಳನ್ನು ಮುಟ್ಟಲು ಹೇಳಿದರು. ಮಗನು ಎಲ್ಲವನ್ನೂ ಕೈಯಲ್ಲಿ ಹಿಡಿದು ಅವುಗಳ ಬಗ್ಗೆ ಹೇಳಿದ. ಎಲ್ಲವೂ ಗಟ್ಟಿಯಾದ ಮೇಲ್ಮೈ ಹೊಂದಿವೆ. ಆಲೂಗಡ್ಡೆಯ ಸಿಪ್ಪೆ ಸುಲಿಯಲು ಆಗುವುದಿಲ್ಲ. ಮೊಟ್ಟೆಯನ್ನು ಸ್ವಲ್ಪ ಹಿಚುಕಿದರೆ ಸಾಕು ಒಡೆದುಹೋಗುತ್ತದೆ ಮತ್ತು ಹೆಸರು ಕಾಳುಗಳು ಒರಟಾದ ಮೇಲ್ಮೈ ಹೊಂದಿವೆ ಎಂದನು.

ಈಗ ತಂದೆ ಒಂದು ಮೊಟ್ಟೆ, ಒಂದು ಆಲೂಗಡ್ಡೆ ಮತ್ತು ಒಂದಿಷ್ಟು ಹೆಸರು ಕಾಳು ನೀಡಿ ಅವುಗಳನ್ನು ಬೆಂಕಿಯಲ್ಲಿ ಹುರಿಯಲು ಮತ್ತು ಹೇಳಿದರು. ಅಂತೆಯೇ ಇನ್ನೊಂದು ಮೊಟ್ಟೆ, ಇನ್ನೊಂದು ಆಲೂಗಡ್ಡೆ ಮತ್ತು ಇನ್ನೊಂದಿಷ್ಟು ಹೆಸರು ಕಾಳುಗಳನ್ನು ಬೇಯಿಸಲು ಹೇಳಿದರು. ಅದರಂತೆ ಮಗನು ಒಂದು ಮೊಟ್ಟೆ, ಒಂದು ಆಲೂಗಡ್ಡೆ ಮತ್ತು ಒಂದಿಷ್ಟು ಹೆಸರು ಕಾಳುಗಳನ್ನು ಬೆಂಕಿಯಲ್ಲಿ ಹುರಿದನು. ಇನ್ನೊಂದು ಮೊಟ್ಟೆ, ಇನ್ನೊಂದು ಆಲೂಗಡ್ಡೆ ಮತ್ತು ಇನ್ನೊಂದಿಷ್ಟು ಹೆಸರು ಕಾಳುಗಳನ್ನು ಬೇಯಿಸಿ ತಂದನು.

ಈಗ ತಂದೆ ಪುನಹ ಅವುಗಳನ್ನು ಮುಟ್ಟಿ ನೋಡಲು ಹೇಳಿದರು. ಮಗನು ಅವುಗಳನ್ನು ಪ್ರತ್ಯೇಕವಾಗಿ ಮುಟ್ಟಿ ನೋಡಿ ಅವುಗಳ ಬಗ್ಗೆ ಹೇಳಿದನು. ಮೊಟ್ಟೆ ಹುರಿದಾಗ ಗಟ್ಟಿಯಾಗಿಯೇ ಇದೆ, ಬೇಯಿಸಿದಾಗ ಅದರ ಸಿಪ್ಪೆ ತೆಗೆಯಲು ಸುಲಭವಾಗಿತ್ತು ಮತ್ತು ತಿನ್ನಲು ಮೃದುವಾಗಿತ್ತು. ಆಲೂಗಡ್ಡೆ ಹುರಿದಾಗ ಸಿಪ್ಪೆ ತೆಗೆಯಲು ಸ್ವಲ್ಪ ಕಷ್ಟವಾಗಿತ್ತು ಮತ್ತು ಬೇಯಿಸಿದಾಗ ಸಿಪ್ಪೆ ತೆಗೆಯಲು ಸುಲಭವಾಗಿತ್ತು ಮತ್ತು ಮೃದುವಾಗಿತ್ತು. ಹೆಸರು ಕಾಳು ಹುರಿದಾಗ ತಿನ್ನಲು ಗಟ್ಟಿಯಾದಗಿದ್ದವು ಮತ್ತು ಬೇಯಿಸಿದಾಗ ಮೃದುವಾದವು ಎಂದು ವಿವರಿಸಿದನು.

ಆಗ ತಂದೆಯು 'ಮಗನೇ ನಾವೂ ಸಹ ಹೀಗೆ ವಿವಿಧ ಸಮಯ ಹಾಗೂ ಸಂದರ್ಭಕ್ಕನುಸಾರವಾಗಿ ಬದಲಾಗಬೇಕು. ಬದಲಾವಣೆ ಜಗದ ನಿಯಮ. ಪರಿಸ್ಥಿತಿಗೆ ಹೊಂದಿಕೊಳ್ಳದ ಜೀವಿ ನಾಶವಾಗುತ್ತದೆ ಎಂದು ಜೀವವಿಕಾಸದ ಸಿದ್ಧಾಂತ ಸಾರಿದ ಚಾರ್ಲ್ಸ್ ಡಾರ್ವಿನ್ ಹೇಳಿರುವುದು ಸತ್ಯವಾಗಿದೆ. ಹಾಗಾಗಿ ಮಾನವರಾದ ನಾವು ಸಮಯ ಸನ್ನಿವೇಶಕ್ಕೆ ತಕ್ಕಂತೆ ನಮ್ಮ ಮಾತು, ನಡೆ-ನುಡಿಗಳನ್ನು ಬದಲಿಸಿಕೊಳ್ಳಬೇಕು. ಇಲ್ಲದಿದ್ದರೆ ಎಲ್ಲರೂ ನಮ್ಮನ್ನು ದೂರವಿಡುತ್ತಾರೆ' ಎಂದು ಬುದ್ಧಿಯ ಮಾತುಗಳನ್ನು ಹೇಳಿದರು. ಇದನ್ನು ಕೇಳಿದ ಮಗನು ಪರಿಸ್ಥಿತಿಗೆ ತಕ್ಕಂತೆ ಹೊಂದಿಕೊಳ್ಳುವ ಗುಣವನ್ನು ಬೆಳೆಸಿಕೊಂಡು ಜಾಣ ಹುಡುಗನಾದ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು:** ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ-ಮೇಲ್:hampitimes@gmail.com
M: 94486 33038

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಯೋಧ–ಶರಣ



ಹೊರಗಿನ ಶತ್ರುಗಳೊಡನೆ ಹೋರಾಡುತ್ತಾ ಬಿಸಿಲು, ಮಳೆ, ಗಾಳಿ ಎನ್ನದೆ ಗೆಲುವು ಸಾಧಿಸುವವನನ್ನು ಮತ್ತು ದೇಶಕ್ಕಾಗಿ ಪ್ರಾಣವನರ್ಪಿಸಿ ವೀರ ಮರಣವನ್ನು ಹೊಂದುವವನನ್ನು ಯೋಧ ಎನ್ನುತ್ತೇವೆ. ಅದೇರೀತಿ ಒಳಗಿನ ಅರಿಷಡ್ ವೈರಿಗಳನ್ನು ಹತೋಟಿಯಲ್ಲಿಟ್ಟುಕೊಂಡು ಸದ್ಭಕ್ತಿಯಿಂದ ಭಗವಂತನ ಧ್ಯಾನ ಮಾಡುತ್ತಾ ಮುಕ್ತಿ ಹೊಂದುವವನನ್ನು ನಿಜವಾದ ಶರಣ ಎನ್ನುತ್ತೇವೆ.

ಯೋಧನ ದೇಶಪ್ರೇಮ ಬಹಿರಂಗದಲ್ಲಿ ಕಂಡುಬಂದರೆ ಶರಣನ ಶ್ರೇಷ್ಠ ಭಕ್ತಿ ಅಂತರಂಗದಲ್ಲಿ ಕಾಣಬರುತ್ತದೆ. ಇಬ್ಬರ ಪ್ರವೃತ್ತಿಯು ಗುರಿ ಮುಟ್ಟುವ ಹೋರಾಟದ್ದೆ. ಅಂತಿಮವಾಗಿ ಶ್ರೇಷ್ಠ ವ್ಯಕ್ತಿತ್ವ ರೂಪಿಸಿಕೊಳ್ಳುತ್ತಾ ತನುಮನಗಳ ವ್ಯಾಮೋಹದಿಂದ ಮುಕ್ತನಾಗಿ ಜೀವನ ಪಾವನಮಯಗೊಳಿಸಿಕೊಳ್ಳುವುದು. ಇದು ಅವರಿಬ್ಬರಲ್ಲೂ ಕಂಡುಬರುವ ಒಂದೇ ಅಂಶಗಳು. ಅವರಿಬ್ಬರ ಪಾತ್ರ ಹೇಗಿರುತ್ತದೆಂದರೆ ಬಸವಣ್ಣನವರ ವಚನದಂತೆ:

**ನಾಳೆ ಬಪ್ಪುದು ನಮಗಿಂದೇ ಬರಲಿ**
**ಇಂದು ಬಪ್ಪುದು ನಮಗೀಗಲೇ ಬರಲಿ**
**ಇದಕ್ಕಾರಂಜುವರು ಇದಕ್ಕಾರಳುಕುವರು**
**ಜಾತಸ್ಯಂ ಮರಣಂ ಧೃವಂ**

ಎಂದು ಸಾವನ್ನೇ ಸಂಪ್ರೀತಿಯಿಂದ ಆಹ್ವಾನಿಸುತ್ತಾ ಮರಣವೇ ಮಹಾನವಮಿ ಎಂದು ಭಾವಿಸಿಕೊಂಡವರು. ಅವರೊಳಗಿರುವ ಗಟ್ಟಿ ಮನಸ್ಸು, ಪರಿಣಾಮಕಾರಿಯಾದ ಚಿಂತನೆ, ಸಾಧನೆಯ ಹಂಬಲ ಮತ್ತು ಸತ್ಯವನ್ನು ಕಂಡುಕೊಳ್ಳುವ ಆತ್ಮಶೋಧ ಅಪರಿಮಿತವಾಗಿರುತ್ತವೆ. ಜೀವನದಲ್ಲಿ ಸಂಭವಿಸುವ ಆತಂಕಗಳು ಮಧ್ಯೆ ತಮ್ಮ ಈ ಹೋರಾಟದಲ್ಲಿ ಅವರು ಜಯಗಳಿಸುವುದು ಅಷ್ಟು ಸುಲಭವಾದುದಲ್ಲ. ಭಕ್ತಿಯೆಂಬುದು ಗರಗಸದಂತೆ ಹೋಗುತ್ತಾ ಕೊಯ್ಯುವುದು, ಬರುತ್ತಾ ಕೊಯ್ಯುವುದು, ಸತ್ಯವೆಂಬ ಕೂರಲಗು ಹಿಡಿದುಕೊಂಡು ಹೋರಾಡುವ ಯೋಧ ಹಾಗೂ ಸದ್ಭಕ್ತ ಶರಣನ ಸಮಷ್ಟಿಯುತವಾದ ಚಿಂತನೆಗೆ ಬೆಲೆ ಕಟ್ಟಲಾಗದು.

ಈಗಾಗಲೆ ಸಮಾಜದಲ್ಲಿ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ಆಧ್ಯಾತ್ಮಿಕ ಕ್ಷೇತ್ರಗಳಲ್ಲಿ ಸಾವಿರಾರು ಮಹಾನ್ ವ್ಯಕ್ತಿಗಳು ಸಾಧನೆ ಮಾಡಿ ಅಮರರಾಗಿದ್ದಾರೆ. ಅದೇರೀತಿ ಈ ಯೋಧ-ಶರಣನ ಆಚಾರ-ವಿಚಾರಗಳು, ಸನ್ಮಾರ್ಗ ತೋರುವ ಪವಿತ್ರವಾದ ವಚನಗಳನ್ನು ಓದಿದಾಗ ನಮ್ಮದೂ ಒಂದು ಪಾಲು ಈ ಪವಿತ್ರವಾದ ದೇಶಕ್ಕಾಗಿ ಇರಬೇಕಲ್ಲವೆ? ಅದಕ್ಕಾಗಿ ದೇಶ ನಮಗೇನು ಕೊಟ್ಟಿದೆ ಎನ್ನುವುದಕ್ಕಿಂತ ದೇಶಕ್ಕಾಗಿ ನಮ್ಮಿಂದ ಏನು ಕೊಡಬಹುದು, ಯಾವ ರೀತಿ ಸಹಾಯ ಆದೀತು ಎಂಬ ಆಲೋಚನೆ ಮುಖ್ಯ.



ಡಾ. ರಾಜಶೇಖರ ಜಮದಂಡಿ,
ಲೇಖಕರು ಮೊ: 9448441471

Hampi Times E-paper
SCAN AND READ

ನಾವು ಶರಣ ಪದವಿ ಪಡೆಯು ವುದೆಂದರೆ 'ಇರುವುದನ್ನೆಲ್ಲವ ಬಿಟ್ಟು ಇರದುದರ ಕಡೆಗೆ ನಡೆದು' ಅಂದರೆ ಸಂಸಾರ ತ್ಯಜಿಸಿ ಸನ್ಯಾಸಿಯಾಗಿ ಕಾಡು ಪಾಲಾಗುವುದಲ್ಲ. ಸಂಸಾರವೆಂಬ ಸಾಗರದಲ್ಲಿ ಈಜುತ್ತಾ ಕೆಸರಿನೊಳಗಿನ ಕಮಲದಂತೆ ಇದ್ದೂ ಇಲ್ಲದಂತೆ ಮನ ನಿಗ್ರಹಿಸಿಕೊಂಡು ಭಕ್ತಿಪ್ರಿಯನಾಗಿ ಬಾಳುವುದು. ಬಸವಣ್ಣನವರು ಹೇಳಿದಂತೆ ವೇದಪ್ರಿಯನಲ್ಲ, ನಾದಪ್ರಿಯನಲ್ಲ, ನಮ್ಮ ಶಿವ ಭಕ್ತಿಪ್ರಿಯನಷ್ಟೆ ಎಂಬಂತೆ ಸಂಸಾರದಲ್ಲಿದ್ದೂ ಸಹ ಪರಮ ವಿಶ್ವಾಸಿಗಳಾಗಿ, ಸದ್ಭಾವ ಸೇವೆಗೈಯ್ದು, ಭಗವಂತನ ಪ್ರಿಯನಾಗಿ ಸದ್ಗತಿ ಪಡೆಯುವುದು.

ದೇಶದ ರಕ್ಷಣೆಗಾಗಿ ಸೈನಿಕ ಯಾವುದೇ ಆಸೆ ಆಮಿಷಗಳಿಗೊಳಗಾಗದೇ ಹೋರಾಡುತ್ತಾನೆ. ತನ್ನ ಪ್ರಾಣ ಹೋಗುತ್ತದೆಂದು ಗೊತ್ತಿದ್ದೂ ದೇಹದಲ್ಲಿ ಹನಿರಕ್ತ ಇರುವವರೆಗೂ ವೈರಿಗಳ ವಿರುದ್ಧ ಸೆಣಸಾಡುತ್ತಾನೆ. ತನ್ನ ದೇಶದ ಜನರಿಗಾಗಿ, ಭಾರತಮಾತೆಯ ಕೀರ್ತಿಗಾಗಿ ಸಾವಿಗಂಜದೇ ಬಲಿದಾನವಾದರೂ ಚಿಂತೆಯಿಲ್ಲ, ಗೆಲುವೊಂದೇ ಯೋಧನಿಗೆ ಗುರಿಯಾಗಿರುತ್ತದೆ. ತನ್ನನ್ನು ಹೆತ್ತು ಹೊತ್ತ ಪವಿತ್ರವಾದ ಮಾತೃ ಭೂಮಿಗಾಗಿ ಋಣ ತೀರಿಸಲು ಹಿಂಜರಿಯಲಾರ. ಈಗಲೂ ಅದೆಷ್ಟೋ ದೇಶಭಕ್ತರು ಗುಡ್ಡಗಾಡು ಪ್ರದೇಶದಲ್ಲಿ ಆತಂಕವಿಲ್ಲದೆ ಜೀವನ ನಡೆಸಿ ನಮಗಾಗಿ ರಣಭೂಮಿಯಲ್ಲಿ ಹೋರಾಡುತ್ತಿದ್ದಾರೆ. ನಿತ್ಯವೂ ನಾವು ಅವರ ನೆನಪನ್ನು ಮೇಲಿಂದ ಮೇಲೆ ಮಾಡಿಕೊಂಡು ಕೈಲಾದಷ್ಟು ಸಮಾಜ ಸೇವೆ ಮಾಡಬೇಕು.

ತಮ್ಮ ಅಸ್ತಿತ್ವಕ್ಕಾಗಿ ಹುಡುಕಾಟ ನಡೆಸಿ, ಭವಿತನದಲ್ಲಿ ಕೆಟ್ಟದ್ದನ್ನೆಲ್ಲಾ ತೆಗೆದು ಹಾಕಿದಾಗ ಭಕ್ತಿಯ ಗುಣಗಳು ಉಳಿಯಬಹುದೆಂಬ ಅರಿವು ಶರಣರಲ್ಲಿ ಕಾಣಬಹುದು. ಭಕ್ತನಾದವನಿಗೆ ಸದ್ಭಾವದಿಂದ ಆಚರಿಸುವ ನಿಜಭಕ್ತಿ ಫಲದಾಯಕವಾಗಿರುತ್ತದೆ. ಮೊದಲೇ ದೇವರಲ್ಲಿ ಹರಕೆ ಹೊತ್ತು ಫಲದ ನಿರೀಕ್ಷೆಯಲ್ಲಿ ಮಾಡುವ ಭಕ್ತಿಯ ಸೇವೆ ನಿಷ್ಫಲ. ಸಂಸಾರದಲ್ಲಿರುವ ಬಯಕೆ ನಾನು ನನ್ನದೆಂಬ ಮೋಹದಲ್ಲಿ ಮುಳುಗಿದವರ ನಡೆ "ಕೊರಳುದ್ದಕ್ಕೆ ಹೂಳಿಸಿಕೊಂಡು ಮುಗಿಲೆತ್ತರಕ್ಕೆ ಹಾರುವೆನು" ಎಂದರೆ ಹೇಗೆ ಸಾಧ್ಯ? ಶರಣ ಸಂಪನ್ನರೆನ್ನಿಸಿಕೊಳ್ಳುವಾಗ ಸಂಸಾರದಲ್ಲಿ ವಿಚಿತ್ರ ಸೆಳೆತಗಳು ಬರುವುದು ಸಹಜ.

**ಒಳಗೆ ಕುಟಿಲ ಹೊರಗೆ ವಿನಯವಾಗಿ**
**ಭಕ್ತರೆನಿಸಿಕೊಂಬುವರ ಒಲ್ಲನೊಲ್ಲನಯ್ಯಾ ಲಿಂಗವು**
**ಅವರು ಪಥಕ್ಕೆ ಸಲ್ಲರು ಸಲ್ಲರಯ್ಯಾ**
**ಒಳಹೊರಗೊಂದಾಗದವರಿಗೆ**
**ಅಳಿಯಾಸೆದೋರಿ ಬೀಸಾಡುವನವರ**
**ಜಗದೀಶ ಕೂಡಲ ಸಂಗಮದೇವ.**

ಬಸವಣ್ಣನವರ ವಚನದಂತೆ ಕೇವಲ ಬಾಹ್ಯದಲ್ಲಿ ಭಕ್ತಿತನ ಪ್ರದರ್ಶಿಸಿದರೆ ಅದು ನಾಟಕೀಯವಾಗುತ್ತದೆ. ಇದನ್ನೇ 'ತನುಭಕ್ತ ಮನಭವಿ' ಎಂದು ಕರೆಯಲಾಗಿದೆ.

ಶರಣರ ನುಡಿಯಂತೆ: "ನೋಡುವಂತಿರಬೇಕು ನೋಡದಂತಿರಬೇಕು, ನೋಡುವ ನೋಟದಲ್ಲಿ ತಾನಿಲ್ಲದಂತಿರಬೇಕು. ಮಾಡುವಂತಿರಬೇಕು, ಮಾಡದಂತಿರಬೇಕು, ಮಾಡುವ ಮಾಟದಲ್ಲಿ ತಾನಿಲ್ಲದಂತಿರಬೇಕು" ಪ್ರಾಪಂಚಿಕ ಸುಖಕ್ಕಾಗಿ ತನ್ನ ತಾನು ಮೈಮರೆಯುವುದು ಸಲ್ಲದು. ಭಕ್ತಿಯ ನಿಜವಾದ ಗುರಿ ಭವಬಂಧನದಿಂದ ದೂರವಾಗಿರೋದು. ಈ ರೀತಿ ನಾವು ನಡೆದುಕೊಳ್ಳದಿದ್ದರೆ ಭಕ್ತಿಯ ಪರಿಚಯ ಆಗುವುದಿಲ್ಲ. ಮನದಲ್ಲಿ ಭಕ್ತಿಯೆಂಬ ಸಸಿಯನ್ನು ಬೆಳೆಸುವಾಗ ಅಲ್ಲಿ ನಿಸ್ವಾರ್ಥಭಾವ ಬಯಲಾಗಬೇಕಷ್ಟೆ.

ಒಟ್ಟಾರೆ ಜೀವನದಲ್ಲಿ ಯೋಧನೊಬ್ಬ ಬಾಹ್ಯ ಒತ್ತಡಗಳಿಗೆ ಅಂದರೆ ದೇಶದ ಭಾವ್ಯಕ್ಯತೆಗೆ ಸ್ಪಂಧಿಸಿದರೆ, ಶರಣನೊಬ್ಬ ಅಂತರಂಗದಲ್ಲಿ ಭಗವಂತನ ನಾಮಸ್ಮರಣೆಯಲ್ಲಿ ತಲ್ಲೀನನಾಗಿರುತ್ತಾನೆ. ಈ ಎರಡೂ ಸ್ವರೂಪಗಳು ಮೇಲ್ನೋಟಕ್ಕೆ ಬೇರೆ ಬೇರೆ ಅಷ್ಟೆ. ಯೋಧನಾಗಿ ಹೋರಾಡುವ ಶರಣನಾಗಿ ಭಾವುಕನಾಗುವ ಪ್ರವೃತ್ತಿಯನ್ನು ಜೀವನದುದ್ದಕ್ಕೂ ದಾರಿದೀಪವಾಗಿರಿಸಿಕೊಂಡರೆ ನಮ್ಮ ಜನ್ಮವೂ ಸಾರ್ಥಕವಾಗುವುದರಲ್ಲಿ ಸಂಶಯವಿಲ್ಲ.

# ಟೇಬಲ್ ಮ್ಯಾನರ್ಸ್

ಮಾನವರು ಸಂಘಜೀವಿಗಳು. ಒಂದು ಸಮೂಹದಲ್ಲಿ ಇರಬೇಕಾದರೆ ಹೇಗೆ ಇರಬೇಕು ಎಂಬ ತಿಳಿವಳಿಕೆ ಇರಬೇಕು. ಆದರೆ ಕೆಲವರು ಯಾವಾಗ ಹೇಗೆ ಇರಬೇಕು ಎಂಬ ಕನಿಷ್ಠ ತಿಳಿವನ್ನು ಹೊಂದಿರುವುದಿಲ್ಲ. ಅಂತಹವರಿಂದ ಆಗುವ ಆಗುಹೋಗುಗಳ ಬಗ್ಗೆ ಈ ಬರೆವಣಿಗೆ ಮೂಡಿದೆ.

ಊಟದ ಸಮಯದಲ್ಲಿ ನಾನು ನೀವು ಒಬ್ಬೊಬ್ಬರೇ ಊಟ ಮಾಡುತ್ತಾ ಕುಳಿತರೆ ಅಲ್ಲಿ ತೊಂದರೆ ಇರುವುದಿಲ್ಲ. ನಾವು ನಮಗೆ ಬೇಕಾದಂತೆ, ಹಿಡಿಸುವಂತೆ ಊಟ ಮಾಡಬಹುದು. ಆದರೆ ಸಹಪಂಕ್ತಿ ಭೋಜನದ ಪರಿಕಲ್ಪನೆ ಕಂಡು ಕೊಂಡ ಮೇಲೆ ಎಲ್ಲರೊಟ್ಟಿಗೆ ಕೂತು ಊಟ ಮಾಡುವ ಹವ್ಯಾಸ ಬೆಳೆದು ಬಂದಿದೆ. ಹೀಗಿರುವಾಗ ಕೆಲವರು ಊಟದ ಸಮಯದಲ್ಲಿ ಇರಬೇಕಾದ ಕನಿಷ್ಠ ತಿಳಿವನ್ನು ಹೊಂದಿರುವುದಿಲ್ಲ.



ಲೋಹಿತೇಶ್ವರಿ ಎಸ್ ಪಿ
ಚಳ್ಳಕೆರೆ ಚಿತ್ರದುರ್ಗ

Hampi Times E-paper
SCAN AND READ

ಇಲ್ಲಿ ಕೆಲವು ಅಂಶಗಳನ್ನು ಚರ್ಚಿಸುವ ಮೂಲಕ ನನ್ನ ಅನುಭವಗಳನ್ನು ತಮ್ಮೊಂದಿಗೆ ಹಂಚಿ ಕೊಳ್ಳು ತ್ತೇನೆ. ಉತ್ತರ ಕರ್ನಾಟಕದ ಮಂದಿಗೆ ಜೋಳದ ರೊಟ್ಟಿ ಜೊತೆಗೆ ಕಾಯಿ ಚಟ್ನಿ, ಬಗೆಬಗೆಯ ಚಟ್ನಿ ಪುಡಿ, ಹಸಿ ತರಕಾರಿ ಇದ್ದರೆ ಅದೇ ಸ್ವರ್ಗ. ಅದು ಚೆಂದವೂ ಹೌದು. ಅದರಲ್ಲೂ ಅವರಲ್ಲಿ ತಯಾರಾಗುವ ರೊಟ್ಟಿ ಹಾಳೆಯಷ್ಟು ತೆಳುವಾಗಿ, ಗರಿಗರಿಯಾಗಿ ಇರುತ್ತವೆ. ಮುರಿದರೆ ಪಟ್ ಎಂದು ಸೌಂಡ್ ಬರುತ್ತದೆ. ಅಂತಹ ರೊಟ್ಟಿಯನ್ನು ತಿನ್ನುವ ಸಂದರ್ಭದಲ್ಲಿ ಬಾಯಿಯಲ್ಲಿ ಇಟ್ಟರೂ, ಮುರಿದರೂ, ಅಗಿದರೂ ಸೌಂಡ್ ಆಗುವುದು ಸಹಜ. ಇನ್ನು ಕೆಲವರು ಬೇಕೆಂದು ಸೌಂಡ್ ಮಾಡಿ ತಿನ್ನುವ ಸೌಂಡ್ ಪಾರ್ಟಿಗಳು ಇದ್ದಾರೆ.



ನನ್ನ ಗೆಳತಿಯೊಬ್ಬಳು ರೊಟ್ಟಿ ಪ್ರಿಯಳು. ಹಾಸ್ಟೆಲಿನಲ್ಲಿ ಕೊಡುವ ರೊಟ್ಟಿ ಸಾಲದೆಂಬಂತೆ ಮನೆಯಿಂದಲೂ ತರುತ್ತಿದ್ದಳು. ಅವಳಿಗಿ ರೊಟ್ಟಿ ತಿನ್ನುವಾಗ ಸೌಂಡ್ ಆದರೆ ಮಾತ್ರ ಸಮಾಧಾನ. ಯಾರಾದರೂ ಅದ್ಯಾಕೆ ಹಾಗೆ ಮಾಡ್ತೀಯಾ ಸುಮ್ನೆ ತಿನ್ನು ಅಂದರೆ ಮುಗಿತು. ಬೇಕೆಂತಲೇ ಸೌಂಡ್ ಸಿಸ್ಟಮ್ ಆನ್ ಮಾಡಿಬಿಡುತ್ತಿದ್ದಳು. ನನಗೂ ಆ ಸೌಂಡ್ ಕೇಳಿಸಿದರೇ ಕಿರಿ ಕಿರಿ ಆದ್ರೆ ಹಾಗೆ ಮಾಡ್ಬೇಡಿ ಅಂತ ಹೇಳಿದಾಗಲೆಲ್ಲ ಹೆಚ್ಚು ಸೌಂಡ್ ಮಾಡುವ ಪಾರ್ಟಿಗಳ ಕಾಟದಿಂದ ಅದನ್ನು ತಪ್ಪಿಸಿಕೊಳ್ಳಲು ಏನು ಹೇಳದೆ ಮೌನಿಯಾಗುತ್ತಿದ್ದೆ. ಇದು ಒಂದು ತರಹದ ಕಷ್ಟ . ಇದನ್ನ ಸಹಿಸಿಕೊಳ್ಳಬಹುದು. ಇನ್ನು ಯಾವುದೇ ಕಾರಣಕ್ಕೂ ಸಹಿಸಿಕೊಳ್ಳಲಾರದಂತಹದ್ದು ಮತ್ತೊಂದು ರೀತಿಯ ಕಷ್ಟವಿದೆ.

ಇತ್ತೀಚಿನ ದಿನಮಾನಗಳಲ್ಲಿ ಊಟ ತಿಂಡಿ ಸರಿಯಾದ ಸಮಯಕ್ಕೆ ಮಾಡದೆ. ಅಸಿಡಿಟಿಗೆ ಬಲಿಯಾದವರ ಸಂಖ್ಯೆ ತೀರಾ ಹೆಚ್ಚು. ಅಂತಹವರು ನಮ್ಮೊಟ್ಟಿಗೆ ಇದ್ದರಂತು ನರಕಕ್ಕೆ ಮೂರೇ ಹೆಜ್ಜೆ. ಕಾರಣ ಗ್ಯಾಸ್ ರಿಲೀಸ್ ಟೈಂ ಯಾವಾಗ ಅಂತ ಅವರಿಗೂ ತಿಳಿದಿರುವುದಿಲ್ಲ. ಅಕ್ಕ ಪಕ್ಕದಲ್ಲಿ ಯಾರಿದ್ದಾರೆ? ಏನು ಮಾಡುತ್ತಿದ್ದಾರೆ? ಎಂಬ ಯಾವ ವಿಷಯದ ಬಗ್ಗೆಯೂ ಅವರಿಗೆ ಅರಿವೇ ಇರುವುದಿಲ್ಲ. ಗ್ಯಾಸ್ ರಿಲೀಸ್ ಆದ ಮೇಲೆ ವಾಸನೆ ಬರುವುದಿಲ್ಲ ಬಿಡಿ, ನನಗೆ ಅಸಿಡಿಟಿ ಪ್ರಾಬ್ಲಂ ಇದೆ ಸ್ವಲ್ಪ ಅಡ್ಜಸ್ಟ್ ಮಾಡ್ಕೋಳಿ, ದೇವರು ಕೊಟ್ಟ...... ಎಂದು ಸಮಾಧಾನ ಪಡಿಸುವ ನಗು ಬೀರುತ್ತ ತಮ್ಮ ಕೆಲಸದಲ್ಲಿ ತೊಡಗುವರು.

ಹೋಟೆಲ್ ಒಂದರಲ್ಲಿ ಪಕ್ಕದ ಟೇಬಲಿ ಕೂತು ಊಟ ಮಾಡುತ್ತಿದ್ದ ವ್ಯಕ್ತಿಯೊಬ್ಬ ತನ್ನ ಸುತ್ತಲೂ ಯಾರಿದ್ದಾರೆ. ಏನು ಮಾಡುತ್ತಿದ್ದಾರೆ ಏನು ನೋಡದೆ ಗ್ಯಾಸ್ ರಿಲೀಸ್ ಮಾಡಿದ ಆ ಸೌಂಡ್ ಗೆ ಕುರ್ಚಿ ತಗೊಂಡು ತಲೆಮೇಲೆ ಕುಕ್ಕಿ ಬಿಡುವಷ್ಟು ಕೋಪ. ಆದರೂ ಏನೂ ಮಾಡದ ಅಸಹಾಯಕತೆ.

ನನ್ನೊಟ್ಟಿಗಿನ ನನ್ನ ಗೆಳತಿಯದೂ ಇದೆ ಕತೆ. ಒಮ್ಮೆ ನಕ್ಕು ಅವಮಾನ ಮಾಡಿ ನೋಡಿದೆ ಬದಲಾಗಬಹುದು ಎಂದು ಆಗಲಿಲ್ಲ. ಮತ್ತೊಮ್ಮೆ ನನಗೆ ಇಂತಹದ್ದೆಲ್ಲಾ ಇಷ್ಟ ಆಗುವುದಿಲ್ಲ ಸ್ವಲ್ಪ ತಿದ್ಕೊ. ನೀನು ಒಬ್ಬಳೇ ಇದ್ದರೆ ಅದು ಬೇರೆ ಎಲ್ಲರೂ ಇರುವಾಗ ಸ್ವಲ್ಪ ಮ್ಯಾನರ್ಸ್ ಇಟ್ಕೊ ಎಂದೆ ಕೋಪಗೊಂಡು ಸ್ವಲ್ಪ ದಿನ ಮಾತು ಬಿಟ್ಟು ದೂರ ಹೋಗಿದ್ದಳು. ಆದರೆ ಸ್ವಲ್ಪ ದಿನದಿಂದ ಮತ್ತೆ ಮಾತಾಡಿಸಲು ಶುರುಮಾಡಿದ್ದಾಳೆ. ಏನೂ ಬದಲಾಗಿಲ್ಲ. ಅವಳ ವರ್ತನೆಗೆ ಏನಾದರೂ ಮಾಡಿ ಬಿಡುವಷ್ಟು ಕೋಪ ಬರುತ್ತೆ. ಆದರೆ ಇರುವ ಕಾರಣ ಹೇಳಿದರೆ ನನಗೆ ಬುದ್ಧಿಮಾತು ಹೇಳುವವರ ಸಂಖ್ಯೆ ಹೆಚ್ಚು ಹೊರತು. ಅವಳ ತಪ್ಪಿನ ಬಗ್ಗೆ ಯಾರೂ ಮಾತಾಡುವುದಿಲ್ಲ.

ಇಂತಹ ಸಮಸ್ಯೆ ನೀವು ಸಹ ಅನುಭವಿಸಿರುವ ಸಾಧ್ಯತೆ ಇರುತ್ತದೆ. ಅಲ್ವಾ? ಆದರೆ ಹೇಗೆ ಹೇಳುವುದು ಅಂತ ನಿಮ್ಮನ್ನ ನೀವೇ ಸಮಾಧಾನ ಮಾಡಿಕೊಂಡು ಸುಮ್ಮನಿರಬಹುದೆಂದು ಅನಿಸುತ್ತದೆ. ವ್ಯವಸ್ಥೆಯೇ ಹಾಗಿದೆ. ಏನು ಮಾಡೋದು. ಆದರೆ ಅಂತ ಮಹಾನ್ ವ್ಯಕ್ತಿಗಳಲ್ಲಿ ನನ್ನದೊಂದು ಮನವಿ. ನಿಮ್ಮ ಆ ನಡವಳಿಕೆ ನಿಮ್ಮೊಟ್ಟಿಗೆ ಇರುವವರಿಗೆ ಹೇಗೆ ತೊಂದರೆ ಕೊಡುತ್ತಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಿ. ಇಲ್ಲವೆಂದಾದರೆ ಅವರು ಹೇಳಿದಾಗಲಾದರೂ ಸರಿಪಡಿಸಿಕೊಳ್ಳಿ. ಅದನ್ನ ಬಿಟ್ಟು ಊಟ ಮಾಡುವಾಗ ಇನ್ ಸೆನ್ಸಿಟಿವ್ ಆಗಿ ವರ್ತಿಸಬೇಡಿ. ಅದರಿಂದ ಎಷ್ಟೋ ಜನ ತೊಂದರೆ ಅನುಭವಿಸುತ್ತಿರುತ್ತಾರೆ.

ನನಗೂ ಇಂತಹ ಅನುಭವ ಇಂದಿಗೂ ಆಗುತ್ತಿದೆ. ಹೇಳಿ ರೋಸಿಹೋಗಿ ಹೇಳಲಾಗದ ಸ್ಥಿತಿ ತಲುಪಿದ್ದೇನೆ. ಎಲ್ಲರೊಂದಿಗೆ ಕೂತು ಊಟ ಮಾಡಲು ಹೆದರುವ ಸ್ಥಿತಿಗೆ ತಲುಪಿದ್ದೇನೆ. ಅದಕ್ಕಾಗಿಯೇ ಈ ದಾರಿ ಹುಡುಕಿಕೊಂಡಿದ್ದೇನೆ. ಈ ಬರೆವಣಿಗೆ ನನ್ನ ಗೆಳತಿಗೆ ಸಿಕ್ಕಿ ಓದಿ, ಅರ್ಥ ಮಾಡಿಕೊಂಡು ಬದಲಾದರೆ ಅದೇ ನನಗೆ ಸಮಾಧಾನ. ನೀವು ಇಂತಹದ್ದೇ ಸಮಸ್ಯೆಯನ್ನು ಎದುರಿಸುತ್ತಿದ್ದರೆ.... ಕಾರಣ ಕರ್ತರಿಗೆ ಶೇರ್ ಮಾಡಿ.....

## ಕವಿ ಮನಸು

### ಆರಿಸಿ ಕೊಡುವಳು...




ಸೂತ್ರವನರಿಯೆನು ಕವನವ ರಚಿಸಲು
ರಾತ್ರಿಯ ಕಾನನ ಪಯಣವಿದು
ಮಾತ್ರೆಯು ಗಣಗಳು ಲೋಹದ ಕಡಲೆಯು
ನೇತ್ರದಿ ತುಂಬಿದೆ ಕಂಬನಿಯು

ಬರೆಯುವ ಗೀತೆಗೆ ವಿಷಯವನರಸಲು
ಕೊರತೆಯು ನನ್ನನು ಕಾಡುತಿದೆ
ದೊರೆಯದೆ ಹೋಯಿತು ಕವನಕೆ ಪದಗಳು
ಕರುಣೆಯ ವಾಣಿಯು ಹರಿಯಿಸದೆ

ಶಾರದೆ ಹರಸಿರೆ ಕವನಗಳುದಿಪವು
ಬಾರದು ಪದಗಳ ಬರಗಾಲ
ತೋರಲಿ ದಯೆಯನು ಅಕ್ಷರ ಮಾತೆಯು
ಕೋರುವೆ ಪೂಜಿಸಿ ಚರಣಗಳ

ಎಲ್ಲಾ ಕಲೆಗಳ ದಾತೆಸರಸ್ವತಿ
ಗೆಲ್ಲಿಸಿ ಬಿಡುವಳು ಲೋಕದೊಳು
ಸಲ್ಲುವ ಮಂದಿಯನಾರಿಸಿ ಕೊಡುವಳು
ಬಲ್ಲವರೀನುಡಿ ನುಡಿಯುವರು॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

### ಬಲೆಯ ಅಲೆ

ಅರಿತಿರ ಬೇಕು ಬದುಕುವ ಕಲೆ
ಇಲ್ಲವಾದರೆ ಹಣೆಯುವರು ಸುತ್ತ ಬಲೆ

ಸಮಾಜದಿಯಾದರೆ ಸತ್ಯದ ಕೊಲೆ
ನ್ಯಾಯ ನೀತಿಗೆ ಇಲ್ಲ ಬೆಲೆ

ಬೀಸಿದರೆ ಹಿಂಸೆ ಅನ್ಯಾಯದ ಅಲೆ
ಉಳಿಯುವುದು ಅಸಾಧ್ಯ ಧರ್ಮದ ನೆಲೆ

ಉಳ್ಳವನು ಹಚ್ಚುವನು ಒಲೆ
ಕಸಿಯಲಾಗುತ್ತಿದೆ ಬಡವನ ಅನ್ನದಲೆ

ನೊಂದವರ ಮನದಿ ಉರಿಯುತ್ತಿದೆ ಜ್ವಾಲೆ
ನಡೆಯುತ್ತಲೇ ಇರುತ್ತದೆ ಕಾರ್ಮಿಕರ
ಕಗ್ಗೊಲೆ

ಮನೆಯೇ ಮೊದಲ ಪಾಠ ಶಾಲೆ
ಇರುವುದಲ್ಲಿ ಪ್ರೀತಿ ಮಮತೆಯ ಸರಮಾಲೆ

ಅರ್ಪಿಸೋಣ ಭಗವಂತನಿಗೆ ಹೂಮಾಲೆ
ಅರಿತವರ್ಯಾರು ಅವನ ಲೀಲೆ

– ಚೇತನ ಭಾರ್ಗವ ಬೆಂಗಳೂರು

### ಚಂಚಲ

ಹದಿಹರೆಯದಲ್ಲಿ ಮನಸ್ಸು ಸದಾ ಚಂಚಲ
ಸಕಾರಾತ್ಮಕ ಭಾವದ ಚಿಂತನೆಯಾದರೆ
ಅಚಲ
ಸಿಲುಕದೆ ದೂರವಿದ್ದರೆ ದುಶ್ಚಟಗಳ ಜಾಲ
ತನ್ನಿಂದ ತಾನೇ ಭವಿಷ್ಯವಾಗುವುದು
ಉಜ್ವಲ.

– ಮಂಜುಶ್ರೀ ಮುರಳೀಧರ್

ಮೈಮೇಲೆ ಹರಿದ ಬಟ್ಟೆ ಇದ್ದರೂ
ಚಿಂತೆಯಿಲ್ಲ, ಕೈಯಲ್ಲೊಂದು
ಕನ್ನಡ ದಿನಪತ್ರಿಕೆ ಇರಲಿ
ಡಿ.ವಿ.ಜಿ.

# ಮೂಕನಾಗಬೇಕು ಜಗದೊಳು ಜ್ವಾಕ್ಯಾಗಿರಬೇಕು

ಪ್ರೀತಿಯ ಮಗಳೇ,

ಅರೆ! ನೆನ್ನೆ ತಾನೆ ನನ್ನನ್ನು ಕಳಿಸಲು ಬಂದ ಅಮ್ಮ ಇಷ್ಟು ಬೇಗ ಪತ್ರ ಬರೆಯಲು ಕಾರಣವೇನು? ಎಂದು ಗಾಬರಿಯಾಗಬೇಡ.. ತಾಯಿ ಹೃದಯದ ಅಳಲು ನಿನಗಿನ್ನೂ ಗೊತ್ತಿಲ್ಲ. ನನ್ನ ಮನದಲ್ಲಿ ಹುದುಗಿಸಿರುವ ಪ್ರೀತಿ, ಮಮತೆ, ಅಕ್ಕರೆ, ಭಯ, ಆತಂಕಗಳ ಕುರಿತು ಇಲ್ಲಿ ಬರೆದಿರುವೆ. ಹಾಗೆಂದು ಇದು ನನ್ನೊಬ್ಬಳ ಅಳಲು ಅಲ್ಲ. ನನ್ನಂತೆ ತಮ್ಮ ಮನೆಯ ಹೆಣ್ಣು ಮಕ್ಕಳನ್ನು ಬೇರೆ ಊರುಗಳಲ್ಲಿ ಓದಲು, ನೌಕರಿ ಮಾಡಲು ಕಳುಹಿಸಿರುವ ಲಕ್ಷಾಂತರ ತಾಯಂದಿರ ಮನದ ಮಾತು.

ನಮ್ಮ ಮನೆಯಂಗಳದಲ್ಲಿ ಚಂದದ ಪ್ರಾಕು ಧರಿಸಿ,ಎರಡು ಪುಟ್ಟ ಜುಟ್ಟು ಹಾಕಿಕೊಂಡು, ಮುಖಕ್ಕೆ ಪೌಡರ್ ಸವರಿ, ಹಣೆಗೆ ಕಾಡಿಗೆಯ ಬೊಟ್ಟುಇಟ್ಟು ಕಾಲಿನ ಗೆಜ್ಜೆಯ ಸದ್ದು ಮಾಡುತ್ತಾ ಪುಟ್ಟ ಪುಟ್ಟ ಹೆಜ್ಜೆ ಇಟ್ಟು ಮನೆಯೆಲ್ಲ ನಡೆಯುತ್ತಿದ್ದ, ಅರಳು ಹುರಿದಂತೆ ಮುದ್ದಾಗಿ ಬಾಯಿ ತುಂಬಾ ಮಾತನಾಡುತ್ತಿದ್ದ ಪುಟ್ಟ ಕಂದ ನೀನು, ಇಂದು ಕಾಲೇಜಿಗೆ ಹೋಗುವಷ್ಟು ದೊಡ್ಡವಳಾಗಿರುವೆ. ಅತ್ಯುತ್ತಮ ಅಂಕ ಗಳಿಸಿ ಒಳ್ಳೆಯ ಕಾಲೇಜಿನಲ್ಲಿ ಸೀಟು ಗಿಟ್ಟಿಸಿ ಉನ್ನತ ಶಿಕ್ಷಣ ಪಡೆಯುವ ಆಸೆಯಲ್ಲಿ ನಾವು ಮನೆಯವರನ್ನೆಲ್ಲಾ ತೊರೆದು ಹಾಸ್ಟೆಲಿನಲ್ಲಿ ವಾಸವಾಗಲು ಹೋಗುತ್ತಿರುವೆ.

ತುಸುವೇ ಸಂಭ್ರಮ ನಮ್ಮೆಲ್ಲರಲ್ಲಿ ಮನೆ ಮಾಡಿದ್ದರೂ ಹೆಚ್ಚು ಆತಂಕ ಮನದಲ್ಲಿ ಇದೆ. ಕಾಣದ ಊರು, ಅರಿಯದ ಜನ, ಬದಲಾದ ವಾತಾವರಣ ಇದೆಲ್ಲಕ್ಕೂ ನೀನು ಅದು ಹೇಗೋ ಹೊಂದಿಕೊಂಡು ಬಿಡುವೆ ಎಂಬ ಭರವಸೆ ನನಗಿದೆ... ಆದರೆ ನನ್ನ ಭಯ ಅದಲ್ಲ, ಅದರ ಅರಿವಾಗಲು ನೀನು ನಾನಲ್ಲ. 'ಅಯ್ಯೋ ಅಮ್ಮ! ಮತ್ತದೇ ರಾಗ ಆಡಬೇಡ ನೀನು' ಎಂಬ ನಿನ್ನ ಗದರಿಕೆಯ ನಡುವೆಯೂ ಮನ ಆತಂಕದ ಗೂಡಾಗಿದೆ. ನಿನ್ನನ್ನು ಕಳಿಸಲು ಬಂದಾಗ ಹೇಳದ ಮಾತುಗಳನು ಬರೆಯಲೇಬೇಕಾದ, ಬರೆದು ತಿಳಿಸಲೇಬೇಕಾದ ಅನಿವಾರ್ಯತೆ ನನ್ನದು.

ನಮ್ಮ ಮನೆಯ ಪ್ರೀತಿಯ ಕೂಸು ನೀನು.. ಅಜ್ಜ ಅಜ್ಜಿಯ ಚಿನ್ನುವಾಗಿ, ಅಪ್ಪನ ಮುದ್ದಿನ ಮಗಳಾಗಿ, ಅಕ್ಕ-ಅಣ್ಣಂದಿರ ನೆಚ್ಚಿನ ತಂಗಿಯಾಗಿ ನನ್ನ ಕಣ್ಮಣಿಯಾಗಿ ಸುರಕ್ಷಿತವಾದ ಗುಬ್ಬಚ್ಚಿ ಗೂಡಿನಂತಹ ಸಂಸಾರದಲ್ಲಿ ಬೆಳೆದಿರುವ ನಿನಗೆ ಹೊರಗಿನ ನಿಷ್ಠುರ ಪ್ರಪಂಚದ ಅರಿವಿಲ್ಲ. ಹಾಗೆಂದು ಇಡೀ ಜಗತ್ತೇ ಕೆಟ್ಟದು ಎಂದಲ್ಲ. ನನಗೆ ಎಲ್ಲವೂ ಗೊತ್ತಿದೆ ಎಂಬ ಹದಿಹರೆಯದ ಹುಮ್ಮಸ್ಸು, ಸುಣ್ಣದ ತಿಳಿ ನೀರನ್ನು ಕೂಡ ಹಾಲೆಂದು ನಂಬುವ ನಿನ್ನ ಬೋಳೆ ಸ್ವಭಾವ, ಸ್ನೇಹಕ್ಕಿಂತ ಮಿಗಿಲಾದದ್ದು ಬೇರೆ ಯಾವುದೂ ಇಲ್ಲ ಎಂಬ ಸ್ಲೋಗನ್ಗಳು, ಪ್ರೀತಿ ಮಾಡಬಾರದು, ಮಾಡಿದರೆ ಜಗಕ್ಕೆ ಹೆದರಬಾರದು ಎಂಬ ಧ್ಯೇಯ ವಾಕ್ಯಗಳು

ಜೀವನ ಇರೋದೇ ಎಂಜಾಯ್ ಮಾಡೋಕೆ, ಈ ಹದಿಹರೆಯದ ವಯಸ್ಸು ಮತ್ತೆ ಬರುತ್ತಾ ಎಂಬ ಮಾತುಗಳು ಹೆಚ್ಚು ರುಚಿಸುವ ಸಮಯ ಇದು. ಯಾವುದೂ ತಪ್ಪಲ್ಲ ನಿಜ..... ಆದರೆ ಅದೆಲ್ಲವೂ ಒಂದು ಮಿತಿಯಲ್ಲಿದ್ದಾಗ ಮಾತ್ರ. ಜೀವನದಲ್ಲಿ ಎಂಜಾಯ್ಮೆಂಟ್ ಇರಬೇಕೆ ಹೊರತು ಎಂಜಾಯ್ಮೆಂಟ್ ಒಂದೇ ಜೀವನದ ಮುಖ್ಯ ಉದ್ದೇಶ ಅಲ್ಲ. ನಮ್ಮ ಬದುಕನ್ನು ವ್ಯವಸ್ಥಿತವಾಗಿ ನಡೆಸಲು ಬೇಕಾಗುವ ವಿದ್ಯೆ, ಆರ್ಥಿಕ ಸ್ವಾವಲಂಬನೆಯನ್ನು ಕೊಡುವ ನೌಕರಿ, ಸಾಮಾಜಿಕ ವಲಯದಲ್ಲಿ ನಿನ್ನದೇ ಆದ ಒಂದು ಒಳ್ಳೆಯ ಗುರುತಿಸುವಿಕೆ ಇವು ಉನ್ನತ ಶಿಕ್ಷಣದ ಮುಖ್ಯ ಧ್ಯೇಯಗಳು.

ಈಗಾಗಲೇ ಬದುಕಿನಲ್ಲಿ ಒಂದು ಮಹತ್ತರ ಘಟ್ಟವನ್ನು ತಲುಪಿರುವ ಸೋದರ ಸಂಬಂಧಿಗಳು ನಾವಂತೂ ಎಂಜಾಯ್ ಮಾಡಲಿಲ್ಲ ನೀವಾದರೂ ಮಾಡಿ ಎಂದು ಲಘುವಾಗಿ ನಿಮಗೆ ಹೇಳಿರುವುದನ್ನು ನೀನು ಗಂಭೀರವಾಗಿ ತೆಗೆದುಕೊಳ್ಳಬೇಡ.... ಓಟದ ನಡುವೆ ಅಲ್ಲೊಂದು ಇಲ್ಲೊಂದು ಅಡೆತಡೆಗಳು ಇದ್ದರೆ ತೊಂದರೆ ಇಲ್ಲ, ಆದರೆ ಆಡೆ ತಡೆಗಳನ್ನೇ ದಾಟುತ್ತ ಮುಂದೆ ಸಾಗುವ ಹೊತ್ತಿಗೆ ನಿನ್ನ ಸಮಯ ವ್ಯರ್ಥವಾಗಬಹುದು, ನಿನ್ನ ಗುರಿ ನಿನ್ನ ಕೈತಪ್ಪಿ ಹೋಗಬಹುದು ಎಂಬುದನ್ನು ಸದಾ ನೆನಪಿನಲ್ಲಿಟ್ಟುಕೋ.

ನಿನ್ನ ಕಾಲೇಜಿನಲ್ಲಿ, ಹಾಸ್ಟೆಲ್ ನಲ್ಲಿ ಎಲ್ಲರೊಂದಿಗೆ ಒಳ್ಳೆಯ ಸ್ನೇಹವನ್ನು ಹೊಂದು ಆದರೆ ಅತಿಯಾದ ನಿರೀಕ್ಷೆ ಇಟ್ಟುಕೊಳ್ಳುವುದು ಬೇಡ. ಸದಾ ಒಂದು ಅಂತರವನ್ನು ಕಾಯ್ದುಕೋ. ಕಹಿ ಎನಿಸಿದರೂ ಜೀವನದ ಸತ್ಯ ಇದುವೇ. ಕೆಲ ಸ್ನೇಹ ಸಂಬಂಧಗಳು ಜೊತೆಗಿರುವವರೆಗೆ ಮಾತ್ರ.. ಒಂದೇ ಊರಿನವರಾದರೆ ಆಗಾಗ ಪರಸ್ಪರ ಭೇಟಿಯಾಗಿ ಕಷ್ಟ ಸುಖವನ್ನಾದರೂ ಹಂಚಿಕೊಳ್ಳುತ್ತಾರೆ, ಆದರೆ ದೂರದಲ್ಲಿರುವ ಸ್ನೇಹಿತರು ಕೇವಲ ಸಾಮಾಜಿಕ ಜಾಲತಾಣಗಳಲ್ಲಿ ಭೇಟಿಯಾಗುತ್ತಾರೆ ಎಂಬುದನ್ನು ನೀನೇ ನೋಡುತ್ತಿರುವೆಯಲ್ಲ. ಹಾಗೆಂದು ಆ ಸ್ನೇಹದ ಕುರಿತು ತಿರಸ್ಕಾರ ಬೇಡ, ಒಳ್ಳೆಯ ಸ್ನೇಹಗಳು ಒಂದು ಮಧುರ ಅನುಭೂತಿಯಂತೆ ನಿನ್ನೊಂದಿಗೆ ಉಳಿದು ಹೋಗಬೇಕು ನಿಜ.. ದುಸ್ವಪ್ನಗಳಂತಲ್ಲ.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Hampi Times E-paper
SCAN AND READ

ಜೀವಿತದ ಕೊನೆಯವರೆಗೂ ನಮ್ಮ ಜೊತೆಗೆ ಬರುವುದು ನಮ್ಮ ಅಪ್ಪ, ಅಮ್ಮ, ಅಣ್ಣ-ತಮ್ಮ, ಅಕ್ಕ- ತಂಗಿ ಮುಂತಾದ ರಕ್ತ ಸಂಬಂಧಗಳು ಮಾತ್ರ. ನಮ್ಮ ಕಷ್ಟ ಸುಖಕ್ಕೆ ನೋವು ನಲಿವಿಗೆ ಜೊತೆಯಾಗುವವರು ನಮ್ಮವರೇ. ಕೆಲ ಸ್ನೇಹಗಳು ಇದಕ್ಕೆ ಅಪವಾದ ಇರಬಹುದು. ನೀನು ಮನೆಯವರನ್ನೆಲ್ಲಾ ಬಿಟ್ಟು ಓದಲು ಹೋಗಿರುವ ಮುಖ್ಯ ಉದ್ದೇಶವನ್ನು ಸದಾ ನೆನಪಿನಲ್ಲಿಡು. ಓದು ಮತ್ತು ಅದಕ್ಕೆ ಸಂಬಂಧಪಟ್ಟ ಕೆಲಸಗಳಲ್ಲಿ ನಿನ್ನನ್ನು ನೀನು ತೊಡಗಿಸಿಕೋ. ಊಟದಲ್ಲಿ ಉಪ್ಪಿನಕಾಯಿ ಇರುವಂತೆ ತಮಾಷೆ, ಜೋಕುಗಳು, ಕಾಲೆಳೆಯುವುದು ಹಿತಮಿತವಾಗಿರಲಿ.... ಆದರೆ ಅದುವೇ ಮುಖ್ಯವಾಗದಿರಲಿ.



ಹಾಸ್ಟೆಲ್ ನಲ್ಲಿ ಕೊಡುವ ಆಹಾರಕ್ಕೆ ನಿನ್ನನ್ನು ನೀನು ಒಗ್ಗಿಸಿಕೊಳ್ಳುವುದನ್ನು ರೂಢಿ ಮಾಡಿಕೋ. ಬೇಕು ಬೇಕೆಂದಾಗ ಊಟ ಮಾಡಲು ಆಗುವುದಿಲ್ಲ. ಆದ್ದರಿಂದ ನಿಗದಿತ ಸಮಯದಲ್ಲಿ ಆಹಾರ ಸೇವಿಸು. ಅಲ್ಲಿ ಕೊಡುವ ಹಸಿ ತರಕಾರಿ ಸೊಪ್ಪುಗಳನ್ನು, ಹಣ್ಣುಗಳನ್ನು ಸೇವಿಸು. ಸಾಧ್ಯವಾದಷ್ಟು ಹೊರಗಿನ ಆಹಾರವನ್ನು ಅವಾಯ್ಡ್ ಮಾಡು. ಹಾಸ್ಟೆಲ್ನ ನಿಯಮಾವಳಿಗಳನ್ನು ಎಂದೂ ಮೀರದಿರು. ಅತಿಯಾಗಿ ರುಚಿಯ ಕಡೆ ಗಮನ ಕೊಡದೆ ಹಿತಮಿತವಾದ ಆಹಾರವನ್ನು ಸೇವಿಸು. ಖರ್ಚಿನ ವಿಷಯದಲ್ಲಿ ಸ್ವಲ್ಪ ಹುಷಾರಾಗಿರು. ಯಾವುದೇ ಕಾರಣಕ್ಕೂ ಹಣದ ದುರ್ಬಳಕೆ ಬೇಡ. ಅದೆಷ್ಟೇ ಒಳ್ಳೆಯ ಸ್ನೇಹಿತರಾಗಿದ್ದರೂ ಕೂಡ ಯಾರೊಂದಿಗೂ ನಿನ್ನ ಖಾತೆಗೆ ಸಂಬಂಧಪಟ್ಟ ಮಾಹಿತಿಗಳನ್ನು ಮತ್ತು ಎಟಿಎಂನ ಪಾಸ್ವರ್ಡ್ ಅನ್ನು ಹಂಚಿಕೊಳ್ಳಬೇಡ.

ನೀನು ಓದುತ್ತಿರುವೆಡೆಯಲ್ಲಾಗಲಿ, ವಾಸಿಸುತ್ತಿರುವ ಸ್ಥಳದಲ್ಲಾಗಲಿ ಪ್ರತಿ ಬಾರಿಯೂ ನಿನ್ನ ಮಾತೇ ನಡೆಯಬೇಕು ಎಂಬ ಹಟ ಬೇಡ. ಬೇರೆಯವರ ಮಾತಿಗೂ ಬೆಲೆ ಕೊಡು. ಬಹಳಷ್ಟು ಸಲ ನಿಮ್ಮ ಹಾಸ್ಟೆಲ್ ವಾರ್ಡನ್ ಗಳು ನಿಮಗೆ ಹೇಳುವ ಮಾತುಗಳು ಒರಟೆನಿಸಬಹುದು, ಬೇಧ ತೋರುತ್ತಾರೆ ಎಂದು ಕೂಡ ಅನಿಸಬಹುದು.... ಆದರೆ ಅವರು ಕೂಡ ನಿಮ್ಮ ಒಳಿತಿಗಾಗಿ ಮತ್ತು ಸಂಸ್ಥೆಯ ಏಳಿಗೆಗಾಗಿ ದುಡಿಯುತ್ತಿರುವವರು. ನಿಮ್ಮ ಎಲ್ಲ ಆಗುಹೋಗುಗಳಿಗೆ ಜವಾಬ್ದಾರರು ಎಂಬುದು ಸದಾ ನೆನಪಿರಲಿ.

ಇನ್ನು ಮುಖ್ಯವಾಗಿ ನಮ್ಮ ಬದುಕಿನಲ್ಲಿ ಬಾಲ್ಯ, ಯೌವನ, ವೃದ್ಧಾಪ್ಯ ಹೇಗೆ ಒಂದರ ನಂತರ ಒಂದು ಕ್ರಮವಾಗಿ ಬರುತ್ತವೆಯೋ ಹಾಗೆಯೇ ವಿದ್ಯಾರ್ಥಿ ಜೀವನ, ಉದ್ಯೋಗ, ಸಂಗಾತಿ ಮತ್ತು ವಿವಾಹಗಳು ಕೂಡ ಅದೇ ಕ್ರಮದಲ್ಲಿ ಬರಬೇಕು. ಇದರಲ್ಲಿ ಮಧ್ಯದ ಎರಡು ವಿಷಯಗಳು ಹಿಂದು ಮುಂದಾದರೆ ಉಳಿದ ಎರಡು ವಿಷಯಗಳನ್ನು ನಿರೀಕ್ಷಿತ ಮಟ್ಟದಲ್ಲಿ ಸಾಧಿಸಲು ಆಗುವುದಿಲ್ಲ. ಆದ್ದರಿಂದ ಈಗ ಓದುವ ವಯಸ್ಸಿನಲ್ಲಿ ಕೇವಲ ನಿನ್ನ ಓದಿನೆಡೆ ಮಾತ್ರ ನಿನ್ನ ಗಮನವಿರಲಿ. ಹರೆಯದ ಆಕರ್ಷಣೆಗೆ ಒಳಗಾಗಿ ವಿರುದ್ಧ ಲಿಂಗಿಯ ಜೊತೆಗಿನ ಸ್ನೇಹಕ್ಕೆ ಪ್ರೀತಿ ಪ್ರೇಮದ ಬಣ್ಣ ಹಚ್ಚುವುದು ಬೇಡ. ನಿನ್ನ ತಂದೆ ತಾಯಿಯರಿಗೂ ನಿನ್ನ ಸ್ನೇಹಿತರನ್ನು ಪರಿಚಯಿಸಿ ಧೈರ್ಯವಾಗಿ ಮಾತನಾಡಬಲ್ಲಷ್ಟು ನಿಷ್ಕಲ್ಮಶ ಸ್ನೇಹವನ್ನು ಹೊಂದಿದ್ದರೆ ಸಾಕು.

ನಮ್ಮ ಹಿರಿಯರು ಇದ್ದಂತೆ ನಾವಿಲ್ಲ ನಿಜ, ಆದರೆ ನಮ್ಮ ಹಿರಿಯರು ಹಾಕಿಕೊಟ್ಟ ದಾರಿ ನಮಗಿದ್ದೆ ಇದೆ. ಆಧುನಿಕತೆಯ ಸೋಗಿಗೆ ಬಿದ್ದು ನಿನ್ನದಲ್ಲದ ಉಡುಗೆ ತೊಡುಗೆಗಳನ್ನು ಧರಿಸಬೇಡ.ಯಾವ ಉಡುಗೆಯಲ್ಲಿ ನೀನು ಅತ್ಯಂತ ಆರಾಮದಾಯಕವಾಗಿಯೂ ಆತ್ಮವಿಶ್ವಾಸದಿಂದಲೂ ಇರುವೆಯೋ ಅಂತಹ ಉಡುಗೆಯನ್ನೇ ಧರಿಸು. ನೆನಪಿಡು...ನಿನ್ನ ಸಭ್ಯ ಉಡುಗೆಯ ಮೂಲಕ ನೀನು ನಿನ್ನ ಕೌಟುಂಬಿಕ ಸಂಸ್ಕಾರವನ್ನು ಪ್ರತಿನಿಧಿಸುವೆ. ಮತ್ತೊಂದು ವಿಷಯ ಹೇಳಿದರೆ ನಿನಗೆ ಬೇಸರವಾಗಬಹುದು... ಇತ್ತೀಚೆಗೆ ಕೇಳಿ ಬರುತ್ತಿರುವ ಹೆಣ್ಣು ಮಕ್ಕಳ ಮೇಲಿನ ಬರ್ಬರ ಕೃತ್ಯಗಳು ಹೆತ್ತವರನ್ನು ಆತಂಕಕ್ಕೆ ಈಡು ಮಾಡಿವೆ. ಕ್ಷಣಿಕ ಆಕರ್ಷಣೆ ಬದುಕನ್ನು ನಾಶ ಮಾಡಬಹುದು. ಅದೆಷ್ಟೇ ಕಾಲ ಮುಂದುವರೆದರೂ ಹೆಣ್ಣುಮಕ್ಕಳು ಬಾಳೆ ಎಲೆಯಂತೆ.ಬಾಳೆ ಎಲೆಯ ಮೇಲೆ ಮುಳ್ಳು ಬಿದ್ದರೂ ಮುಳ್ಳಿನ ಮೇಲೆ ಬಾಳೆ ಎಲೆ ಬಿದ್ದರೂ ಹರಿಯುವುದು ಬಾಳೆ ಎಲೆಯೇ ... ಅಂತೆಯೇ ಹೆಣ್ಣು ತಾನಾಗಿ ಮತ್ತೊಬ್ಬರ ಆಕರ್ಷಣೆಗೆ ಒಳಗಾದರೂ ಮತ್ತೊಬ್ಬರು ಆಕೆಯ ಆಕರ್ಷಣೆಗೆ ಒಳಪಟ್ಟರೂ ಅಪಾಯ ಹೆಣ್ಣಿಗೆ ಎಂಬುದನ್ನು ಎಂದೂ ಮರೆಯಬೇಡ. ಒಂದು ತಪ್ಪು ಹೆಜ್ಜೆ ಜೀವನವಿಡೀ ಪಶ್ಚಾತಾಪಕ್ಕೆ ದಾರಿ ಮಾಡಿಕೊಡುವುದು ಬೇಡ ಎಂಬ ಎಚ್ಚರ ನಿನಗಿದ್ದರೆ ಸಾಕು.

ಬದುಕಿದ್ದರೆ ಏನನ್ನು ಬೇಕಾದರೂ ಸಾಧಿಸಬಹುದು... ಕಳೆದ ಒಂದುವರೆ ತಿಂಗಳಿನಲ್ಲಿ ನಡೆದ ಹೆಣ್ಣು ಮಕ್ಕಳ ಸಾಲು ಸಾಲು ಹತ್ಯೆಗಳನ್ನು ನೋಡಿ ಮನಸ್ಸಿಗೆ ಅನ್ನಿಸಿದ್ದು ಹೀಗೆ. ನಾವು ಕೇವಲ ಹೆಣ್ಣು ಮಕ್ಕಳನ್ನು ನಮ್ಮ ಹಕ್ಕು ಎಂದು ಭಾವಿಸುವ ಅಸಹಿಷ್ಣು ಗಂಡು ಜನಾಂಗವನ್ನು ಹುಟ್ಟು ಹಾಕಿದ್ದು ಪ್ರಸ್ತುತ ಅದರ ಫಲವನ್ನು ಉಣ್ಣುತ್ತಿದ್ದೇವೆ. ಆದರೆ ಇದಕ್ಕೆ ಬಲಿಯಾಗಿರುತ್ತಿರುವುದು ಪಾಪದ ಹೆಣ್ಣು ಮಕ್ಕಳು. ಅರಿಯದ ವಯಸ್ಸಿನಲ್ಲಿ ಪ್ರೀತಿ ಪ್ರೇಮದ ಗುಂಗಿಗೆ ಬಿದ್ದು, ತಂದೆ ತಾಯಿ ಬುದ್ಧಿ ಹೇಳಿದಾಗ ವಿದ್ಯಾರ್ಥಿ ದೆಸೆಯಲ್ಲಿ ತಾನು ತಪ್ಪು ಮಾಡುತ್ತಿರುವೆ ಎಂಬ ಅರಿವು ಉಂಟಾಗಿ ಪ್ರೀತಿಯಿಂದ ಹಿಂದೆ ಸರಿದ ತಪ್ಪಿಗೆ ಒಂದೊಮ್ಮೆ ತನ್ನನ್ನು ಪ್ರೀತಿಸಿದ ಹುಡುಗನೇ ತನ್ನನ್ನು ಕೊಚ್ಚಿ ಕೊಂದರೆ ಆಕೆಯನ್ನು ಇಷ್ಟು ವರ್ಷಗಳ ಕಾಲ ಲಾಲಿಸಿ ಪಾಲಿಸಿದ ತಂದೆ ತಾಯಿಗಳ ಪಾಡೇನು? ಎಂದು ನೆನೆದಾಗ ಮೈಯಲ್ಲಿ ನಡುಕ ಉಂಟಾಗುತ್ತದೆ. ನಿಮ್ಮ ಬದುಕು ಕೇವಲ ನಿಮ್ಮದಲ್ಲ. ನಿಮ್ಮ ಬದುಕಿನ ಆಗುಹೋಗುಗಳ ಸುತ್ತ ನಿಮ್ಮ ಕುಟುಂಬ ಮತ್ತು ಸಮಾಜ ನಿಮ್ಮೊಂದಿಗೆ ಜೋಡಿಸಲ್ಪಟ್ಟಿ ರುತ್ತದೆ. ಆದ್ದರಿಂದ ನಿನ್ನ ಹುಷಾರಿನಲ್ಲಿ ನೀನಿರು ಎಂದು ಮಾತ್ರ ಹೇಳುತ್ತೇನೆ. ಸಮಾಜಕ್ಕೆ ಒಳ್ಳೆಯ ಉದಾಹರಣೆಯಾಗದಿದ್ದರೂ ಪರವಾಗಿಲ್ಲ ಆದರೆ ಕೆಟ್ಟ ಉದಾಹರಣೆಯಾಗಬಾರದು ಎಂಬ ಅರಿವಿನ ಪ್ರಜ್ಞೆ ನಿನ್ನಲ್ಲಿ ಸದಾ ಜಾಗೃತವಾಗಿರಲಿ.

ಅಷ್ಟಾಗಿಯೂ ನಿನಗೆ ಏನೇ ತೊಂದರೆಯಾದರೂ ಮುಕ್ತವಾಗಿ ಹೇಳಿಕೋ.... ಒಂದು ಸುಳ್ಳನ್ನು ಮುಚ್ಚಲು ನೂರಾರು ಸುಳ್ಳುಗಳನ್ನು ಹೇಳುವುದರ ಬದಲು ಒಂದು ಸತ್ಯವನ್ನು ಹೇಳಿ ಬೈಸಿಕೊಂಡರೂ ಪರವಾಗಿಲ್ಲ ಮನಸ್ಸು ನಿರಾಳವಾಗಿರುತ್ತದೆ ಎಂಬುದನ್ನು ಅರಿತುಕೋ. ಬದುಕಿನ ಯಾವುದೇ ಹಂತದಲ್ಲಿಯಾದರೂ ನಮ್ಮ ತೋಳುಗಳ ಆಸರೆ ನಿನಗೆ ಇದ್ದೇ ಇರುತ್ತದೆ... ಆದರೆ ಆ ತೋಳುಗಳಲ್ಲಿ ಕಸುವು ತುಂಬುವ ಕೆಲಸ ಮಾತ್ರ ನಿನ್ನದು. ಅದು ನಿನ್ನ ನಡತೆಯಲ್ಲಿ, ವಿದ್ಯಾಭ್ಯಾಸದಲ್ಲಿ ಮತ್ತು ಶೈಕ್ಷಣಿಕ ಅಭಿವೃದ್ಧಿಯಲ್ಲಿ ಸದಾ ಇರಲೇಬೇಕು.

ನಿನ್ನ ಕುರಿತಾಗಿ ನನ್ನ ಆಸೆ ಆಕಾಂಕ್ಷೆಗಳಿಗೆ ಮಿತಿ ಇಲ್ಲ,ಭಯ ಆತಂಕಗಳು ನಿರಾಧಾರವಾದುದು ಎಂದು ನಿನಗೆ ಅನಿಸಿದರೆ ಅದು ನಿನ್ನ ತಪ್ಪಲ್ಲ. ನನ್ನಂತೆ ನೀನೂ ಕೂಡ ತಾಯಾಗಿ ನಿನ್ನ ಮಕ್ಕಳನ್ನು ಬೆಳೆಸುವಾಗ ನಿನಗೆ ಇದರ ಅನುಭವ ಖಂಡಿತವಾಗಿಯೂ ಆಗುತ್ತದೆ. ಪತ್ರ ತುಸು ದೊಡ್ಡದಾಯಿತು ಆದರೆ ಓದದೆ ಇರಬೇಡ. ನಿನ್ನ ಹಿತದಲ್ಲಿಯೇ ನಮ್ಮ ಕುಟುಂಬದ ಒಳಿತಿದೆ. ಇಂತಿ ನಿನ್ನನ್ನು ಸದಾ ಪ್ರೀತಿಸುವ ನಿನ್ನ ಅಮ್ಮ

## ಶಾಲಾ ಕಾಲೇಜ್‌ನಲ್ಲಿ ನಿಲ್ಲದ ಡೊನೇಷನ್ ಹಾವಳಿ

ಮೊದಲ ಪುಟದಿಂದ

ಮಧ್ಯೆ ಕಮಿಷನ್ ದಂದೆ ಜೋರಾಗಿಯೇ ನಡೆಯುತ್ತಿದೆ. ಕಮಿಷನ್‌ಗಾಗಿ ಪಠ್ಯಪುಸ್ತಕ, ಸಮವಸ್ತ್ರ ಖರೀದಿಸಲು ಅಂಗಡಿಯ ವಿಳಾಸದ ಟೋಕನ್ ನೀಡುತ್ತಿದ್ದಾರೆ. ಶುಲ್ಕದ ವಿವರವನ್ನು ನೋಟಿಸ್ ಬೋರ್ಡ್‌ನಲ್ಲಿ ಸಾರ್ವಜನಿಕವಾಗಿ ಹಾಕಲು ಆದೇಶವಿದ್ದರೂ ಹಾಕುತ್ತಿಲ್ಲಾ. ಫೆಬ್ರವರಿ, ಮಾರ್ಚ್ ತಿಂಗಳಲ್ಲಿಯೇ ಶಾಲಾ ಪ್ರವೇಶಾತಿಯನ್ನು ಅನೇಕರು ಪೂರ್ಣಗೊಳಿಸಿದ್ದಾರೆ. ಈಗ ಹೆಸರಿಕಷ್ಟೆ ಪ್ರವೇಶಾತಿಯನ್ನು ಆರಂಭಿಸಿವೆ. ಈ ಎಲ್ಲಾ ವ್ಯವಸ್ಥೆಯನ್ನು ಅಧಿಕಾರಿಗಳು, ಜನಪ್ರತಿನಿಧಿಗಳು ನೋಡಿ ನೋಡದಂತೆ ಸುಮ್ಮನಿರುವುದು ಖಂಡನೀಯ.

ಸರ್ಕಾರದ ಆದೇಶದಂತೆ ಖಾಸಗಿ ಶಾಲೆಗಳು ಶುಲ್ಕವನ್ನು ಸಂಗ್ರಹಿಸಬೇಕು., ಪಠ್ಯಪುಸ್ತಕ ಮತ್ತು ಸಮವಸ್ತ್ರಗಳನ್ನು ಪೋಷಕರಿಗೆ ಸ್ವತಂತ್ರವಾಗಿ ಖರೀದಿಸಲು ವ್ಯವಸ್ಥೆ ಮಾಡಬೇಕು., ವಂತಿಗೆ ವಿರೋಧಿ ಸಮಿತಿ ರಚಿಸಬೇಕು., ಶುಲ್ಕದ ವಿವರದ ಬೋರ್ಡ್‌ನ್ನು ಸಾರ್ವಜನಿಕವಾಗಿ ಹಾಕಬೇಕು., ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ನಿಯಂತ್ರಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವಿರುವ ಕೇಂದ್ರಿಯ ಶಾಸನ ಜಾರಿಗೆ ತರಬೇಕು. ಜಿಲ್ಲಾ ಮತ್ತು ತಾಲೂಕು ಮಟ್ಟದಲ್ಲಿ, ಶಾಸಕರು ಹಾಗೂ ತಹಶೀಲ್ದಾರರ ನೇತೃತ್ವದಲ್ಲಿ ಶಿಕ್ಷಣ ಸಂಸ್ಥೆಯ ಮುಖ್ಯಸ್ಥರು, ಶಿಕ್ಷಣ ಇಲಾಖೆಯ ಮುಖ್ಯಸ್ಥರು, ಪಾಲಕರು ವಿದ್ಯಾರ್ಥಿ ಯುವಜನ ಸಂಘಟನೆಯ ಪ್ರತಿನಿಧಿಗಳ ಜಂಟಿ ಸಭೆ ಕರೆಯಬೇಕು ಎಂದು ಒತ್ತಾಯಿಸಿದರು.

## ಶಿಕ್ಷಣ ಇಲಾಖೆಯ ಜಾಣಕುರುಡುತನಕ್ಕೆ ಜನಾಕ್ರೋಶ

**ಹಂಪಿ ಟೈಮ್ಸ್ ಹರಪನಹಳ್ಳಿ**

ತಾಲ್ಲೂಕು NSUI ಸಮಿತಿ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಡೊನೇಷನ್ ಹಾವಳಿ ನಿಯಂತ್ರಿಸಲು ಆಗ್ರಹಿಸಿ ಗುರುವಾರ ಪ್ರತಿಭಟನೆ ನಡೆಸಿತು.

ತಾಲೂಕಿನಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳು ಕಾನೂನು ಉಲ್ಲಂಘಿಸಿ ಶಿಕ್ಷಣ ಇಲಾಖೆಯ ನಿಯಮಗಳನ್ನು ಗಾಳಿಗೆ ತೂರಿ ಮನಸೋ ಇಚ್ಛೆ ಪೋಷಕರು ಮತ್ತು ವಿದ್ಯಾರ್ಥಿಗಳಿಂದ ಡೊನೇಷನ್ ಅಕ್ರಮವಾಗಿ ವಸೂಲಿ ಮಾಡುತ್ತಿರುವುದನ್ನು ಖಂಡಿಸಿ ಉಪ ತಹಶೀಲ್ದಾರ್ ನಟರಾಜ್ ಅವರಿಗೆ ಮನವಿ ಸಲ್ಲಿಸಲಾಯಿತು.

ಸಾರ್ವಜನಿಕ ಶಿಕ್ಷಣ ಇಲಾಖೆಯು ನೋಡಿಯೂ ಕಣ್ಣು ಮುಚ್ಚಿ ಕುಳಿತಿರುವುದುಕಂಡುಬರುತ್ತಿದೆ.ಬಿಇಒ,ತಡೆಗೆನಿರ್ಲಕ್ಷ್ಯವಹಿಸಿದ್ದಾರೆ. ಪಿಯುಸಿ ತರಗತಿ ವಿಧ್ಯಾರ್ಥಿಗಳಿಂದ 10 ಸಾವಿರ ರೂ.ನಿಂದ 35ಸಾವಿರ ರೂ.ವರೆಗೆ ಪಾಲಕರ ಬಳಿ ಹಣ ವಸೂಲಿ ಮಾಡುತ್ತಿದ್ದಾರೆ. ಇದನ್ನು NSUI ತಾಲೂಕು ಸಮಿತಿ ತೀವ್ರವಾಗಿ ಖಂಡಿಸುತ್ತದೆ ಎಂದರು.

ಈ ಸಂದರ್ಭದಲ್ಲಿ NSUI ಬಳ್ಳಾರಿ ಮತ್ತು ವಿಜಯನಗರ ಜಿಲ್ಲಾ ಉಪಾಧ್ಯಕ್ಷರು ಎಂ.ಡಿ.ಶ್ರೀಕಾಂತ ಯಾದವ್, NSUI ಬಳ್ಳಾರಿ ಮತ್ತು ವಿಜಯನಗರ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಾಸಿಂ ಡೆಂಕಿ, ಅಬುಸಾಲೇಹ, ವೆಂಕಟೇಶ್ ನಾಯ್ಕ್ ಅಜಾದ, ಬಾಲಾಜಿ, ಮುಶ್ರಫ್ ಅಲಿ, ರೇವಣ್ಣ, ಮಂಜು, ಸಮೀರ್, ಪಾಲ್ಗೊಂಡಿದ್ದರು.

ಹಂಪಿ ಟೈಮ್ಸ್
HAMPI TIMES

## ನಿತ್ಯ ಪಂಚಾಂಗ

ಮಾಸ: ವೈಶಾಖ । ಸಂವತ್ಸರ: ಕ್ರೋಧಿ

**24–05–2024 – ಶುಕ್ರವಾರ**

| | |
|---|---|
| ತಿಥಿ | : ಪ್ರಥಮ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಅನುರಾಧ |
| ಯೋಗ | : ಶಿವ |
| ಕರಣ | : ಬಾಳವ |
| ಸೂರ್ಯೋದಯ | : 05:43:42 |
| ಸೂರ್ಯಾಸ್ತ | : 19:04:10 |
| ರಾಹು | : 10:44–12:24 |
| ಯಮಘಂಡ | : 15:44–17:24 |
| ಗುಳಿಕ | : 07:24–09:04 |

## ತುಂಗಭದ್ರಾ ನೀರಿನ ಮಟ್ಟ



**ಗುರುವಾರ : 23–05–2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1577.49 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 12 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 3.373 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1579.12 ಅಡಿ |
| ಒಳ ಹರಿವು | 380 ಕ್ಯುಸೆಕ್ |
| ಹೊರ ಹರಿವು | 191 ಕ್ಯುಸೆಕ್ |
| ಸಾಮರ್ಥ್ಯ | 4.057 ಟಿಎಂಸಿ |

# ತೇರಿಗೆ ಕೋಳಿ ತೂರಿದ ಭಕ್ತರು

## ವಿಜೃಂಭಣೆಯಿಂದ ಜರುಗಿದ ಬಿಕ್ಕಿ ಮರಡಿ ದುರ್ಗಮ್ಮದೇವಿ ರಥೋತ್ಸವ

■ **ಹಂಪಿ ಟೈಮ್ಸ್ ಕೊಟ್ಟೂರು**

ವಿಶಿಷ್ಟಾಚರಣೆ ಹೊಂದಿರುವ ಬಿಕ್ಕಿ ಮರಡಿ ದುರ್ಗಮ್ಮ ದೇವಿಯ ರಥೋತ್ಸವವು ಬೌದ್ಧ ಪೂರ್ಣಿಮೆ ಗುರುವಾರ ಸಂಜೆ 6.15ರ ವೇಳೆಗೆ ಸಾವಿರಾರು ಭಕ್ತಸ್ತೋಮದಲ್ಲಿ ವಿಜೃಂಭಣೆಯಿಂದ ನೆರವೇರಿತು.



ದುರ್ಗಮ್ಮದೇವಿಗೆ ಹರಕೆ ಹೊತ್ತ ಭಕ್ತರು ಜೀವಂತ ಕೋಳಿಗಳನ್ನು ತೇರಿಗೆ ತೂರಿ ತಮ್ಮ ಭಕ್ತಿ ಸಮರ್ಪಿಸಿದರು, ಅನೇಕ ಭಕ್ತರು ಬಾಳೆ ಹಣ್ಣು ಎಸೆದು ನಮಸ್ಕರಿಸಿದರು.

ಜೀವಂತ ಕೋಳಿಗಳನ್ನು ತೂರುವ ಏಕೈಕ ಸಂಪ್ರದಾಯ ಕೊಟ್ಟೂರಿನ ಬಿಕ್ಕಿಮರಡಿ ದುರ್ಗಮ್ಮ ದೇವಿಯ ರಥೋತ್ಸವದ್ದಾಗಿದ್ದು, ಇದನ್ನು ಕಣ್ತುಂಬಿಕೊಳ್ಳಲು ಭಕ್ತರ ದಂಡು ದಂಡು ಮಧ್ಯಾಹ್ನ 3 ರಿಂದಲೇ ಕೆರೆ ದಂಡೆಯ ಮೇಲೆರುವ ಮರಡಿ ಮೇಲೆ ಜಮಾವಣೆಗೊಂಡಿತ್ತು. ಸಪ್ತಪದಿ ತುಳಿದ ನೂತನ ಜೋಡಿಗಳು ರಥೋತ್ಸವವನ್ನು ಕಣ್ತುಂಬಿಕೊಂಡರು. ರಥೋತ್ಸವಕ್ಕೆ ಮುನ್ನ ದುರ್ಗಮ್ಮದೇವಿ ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯಲ್ಲಿ ಪ್ರತಿಷ್ಠಾಪಿಸಿ ಮೇಳದ ಮಂಗಳ ವಾದ್ಯಗಳೊಂದಿಗೆ ದೇವಿಯ ಪಲ್ಲಕ್ಕಿ ಉತ್ಸವವನ್ನು ತಂದು ರಥದ ಸುತ್ತ ಪ್ರದಕ್ಷಿಣೆ ಹಾಕಿ ರಥದಲ್ಲಿ ಪ್ರತಿಷ್ಠಾಪಿಸಿದರು. ನಂತರ ದೇವಿಯ ಪಟಾಕ್ಷಿ ಸವಾಲು ಪ್ರಕ್ರಿಯೆ ನಡೆಯಿತು. ಸವಾಲು ಪ್ರಕ್ರಿಯೆಯಲ್ಲಿ ಪಟ್ಟಣದ ಸುಂಕದಕಲ್ಲು ಮೂಗಣ್ಣ 36101 ರೂ.ಗೆ ಪಟಾಕ್ಷಿಯನ್ನು ತಮ್ಮದಾಗಿಸಿಕೊಂಡರು. ಪಟಾಕ್ಷಿ ಸವಾಲು ಮುಗಿಯುತ್ತಿದ್ದಂತೆ ರಥೋತ್ಸವಕ್ಕೆ ಕೋಳಿ, ಬಾಳೆ ಹಣ್ಣು ಎಸೆದು ಭಕ್ತರು ನಮಸ್ಕರಿಸಿದರು, ತೇರು ಮರಡಿ ಮೇಲಿರುವ ಶ್ರೀ ಆಂಜನೇಯ ದೇವಸ್ಥಾನದ ಪಾದಗಟ್ಟೆವರೆಗೆ ಸಾಗಿ ಮತ್ತೆ ಮರಳಿ ಮೂಲಸ್ಥಾನಕ್ಕೆ ಬಂದು ನಿಂತಿತು.

ಪ್ರಸ್ತುತ ವರ್ಷ ಮಳೆ ಆರ್ಭಟ ಇಲ್ಲದ ಕಾರಣ ರಥೋತ್ಸವಕ್ಕೆ ಆಗಮಿಸಿದ ನವ ವದು–ವರರು ಹಾಗೂ ಭಕ್ತಾದಿಗಳು ವಿಶಾಲವಾದ ಮರಡಿ ಮೇಲೆ ಕುಳಿತು ಮಂಡಕ್ಕಿ ಮಿರ್ಚಿ ಸವಿಯುತ್ತ ಕತ್ತಲಾಗುವವರೆಗೆ ದೇವಸ್ಥಾನ ಮತ್ತು ಕೆರೆ ಬಳಿ ಪರಿಶುದ್ಧ ಗಾಳಿ ಸ್ವೀಕರಿಸುತ್ತ ಸಂಭ್ರಮಿಸಿದರು.

# ವಾಡಿಕೆಗಿಂತ ಅಧಿಕ ಮಳೆ

## ಬಿತ್ತನೆ ಪ್ರಗತಿಯು ಗುರಿಯನುಸಾರ ಆಗಬೇಕು: ಡಿಸಿ ದಿವಾಕರ ಸೂಚನೆ
## ಬಿತ್ತೆನೆ ಬೀಜ, ರಸಗೊಬ್ಬರ ಸಮರ್ಪಕವಾಗಿ ಪೂರೈಕೆಯಾಗಲಿ




■ **ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರು ಆಗಿರುವ ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಅವರು ಮೇ 23ರಂದು ವಿವಿಧ ಇಲಾಖೆಯ ಅಧಿಕಾರಿಗಳ ಸಭೆ ನಡೆಸಿ 2024ನೇ ಸಾಲಿನ ಮುಂಗಾರು ಹಾಗೂ ಪೂರ್ವ ಮುಂಗಾರು ಮಳೆ ಅವಧಿಯ ಪೂರ್ವ ಸಿದ್ಧತೆ ಸೇರಿದಂತೆ ನಾನಾ ವಿಷಯಗಳ ಬಗ್ಗೆ ಸಮಗ್ರ ಚರ್ಚಿಸಿದರು.

ಜಿಲ್ಲಾಡಳಿತ ಭವನದಲ್ಲಿನ ಕೇಸ್ವಾನ್ ಹಾಲನಲ್ಲಿ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಪೂರ್ವ ಮುಂಗಾರು ಹಂಗಾಮಿನ ವಿಸ್ತೀರ್ಣ ಗುರಿ ಹಾಗೂ ಬಿತ್ತನೆ, ಬಿತ್ತನೆ ಬೀಜ ಬೇಡಿಕೆ ಮತ್ತು ಲಭ್ಯತೆ, ರಸಗೊಬ್ಬರದ ಬೇಡಿಕೆ ಹಾಗೂ ಮೇವು ಬ್ಯಾಂಕ್ ಮತ್ತು ಗ್ರಾಮೀಣ ಕುಡಿಯುವ ನೀರು ಸರಬರಾಜು ಪರಿಸ್ಥಿತಿ ಸೇರಿದಂತೆ ನಾನಾ ವಿಷಯಗಳ ಬಗ್ಗೆ ಅಧಿಕಾರಿಗಳಿಂದ ಸಮಗ್ರ ಮಾಹಿತಿ ಪಡೆದರು.

ವಿಜಯನಗರ ಜಿಲ್ಲೆಯಲ್ಲಿ ಮೇ 1ರಿಂದ ಮೇ 22ರವರೆಗೆ ವಿವಿಧ ತಾಲೂಕುಗಳಲ್ಲಿ ವಾಡಿಕೆಗಿಂತ ಹೆಚ್ಚಿನ ಮಳೆ ಬಿದ್ದಿದೆ. ಹೊಸಪೇಟೆ ತಾಲೂಕಿನಲ್ಲಿ ವಾಡಿಕೆ ಮಳೆ 31.5 ಮಿಮಿ ಇದ್ದು ವಾಸ್ತವಿಕವಾಗಿ 93.8 ಮಿಮಿ ಸುರಿದಿದೆ. ಹಡಗಲಿ ತಾಲೂಕಿನಲ್ಲಿ ವಾಡಿಕೆ ಮಳೆ 40.4 ಮಿಮಿ ಇದ್ದು ವಾಸ್ತವಿಕವಾಗಿ 32.2 ಮಿಮಿ ಸುರಿದಿದೆ. ಹಗರಿಬೊಮ್ಮನಹಳ್ಳಿ ತಾಲೂಕಿನಲ್ಲಿ ವಾಡಿಕೆ ಮಳೆ 35.6 ಮಿಮಿ ಇದ್ದು ವಾಸ್ತವಿಕವಾಗಿ 75.2 ಮಿಮಿ ಸುರಿದಿದೆ. ಹರಪನಹಳ್ಳಿ ತಾಲೂಕಿನಲ್ಲಿ ವಾಡಿಕೆ ಮಳೆ 59.2 ಮಿಮಿ ಇದ್ದು ವಾಸ್ತವಿಕವಾಗಿ 65.3 ಮಿಮಿ ಸುರಿದಿದೆ. ಕೊಟ್ಟೂರ ತಾಲೂಕಿನಲ್ಲಿ ವಾಡಿಕೆ ಮಳೆ 31.5 ಮಿಮಿ ಇದ್ದು ವಾಸ್ತವಿಕವಾಗಿ 104.0 ಮಿಮಿ ಸುರಿದಿದೆ. ಕೂಡ್ಲಿಗಿ ತಾಲೂಕಿನಲ್ಲಿ ವಾಡಿಕೆ ಮಳೆ 23.9 ಮಿಮಿ ಇದ್ದು ವಾಸ್ತವಿಕವಾಗಿ 96.1 ಮಿಮಿ ಸುರಿದಿದೆ.

2024–25ರಲ್ಲಿ ಮುಂಗಾರು ಹಂಗಾಮಿನಲ್ಲಿ ಹೊಸಪೇಟೆ ತಾಲೂಕಿನಲ್ಲಿ ನೀರಾವರಿ 9,100 ಹಾಗೂ ಖುಷ್ಕಿ 5335., ಹಡಗಲಿ ತಾಲೂಕಿನಲ್ಲಿ ನೀರಾವರಿ 24,717 ಹಾಗೂ ಖುಷ್ಕಿ 34,243., ಹಗರಿಬೊಮ್ಮನಹಳ್ಳಿ ತಾಲೂಕಿನಲ್ಲಿ ನೀರಾವರಿ 12,259 ಹಾಗೂ ಖುಷ್ಕಿ 31,572., ಹರಪನಹಳ್ಳಿ ತಾಲೂಕಿನಲ್ಲಿ ನೀರಾವರಿ 6692 ಹಾಗೂ ಖುಷ್ಕಿ 80,704., ಕೊಟ್ಟೂರ ತಾಲೂಕಿನಲ್ಲಿ ನೀರಾವರಿ 3488 ಹಾಗೂ ಖುಷ್ಕಿ 28,735 ಮತ್ತು ಕೂಡ್ಲಿಗಿ ತಾಲೂಕಿನಲ್ಲಿ ನೀರಾವರಿ 2929 ಹಾಗೂ ಖುಷ್ಕಿ 54,828 ಬಿತ್ತನೆ ಪ್ರದೇಶದಲ್ಲಿ ಬಿತ್ತನೆ ಗುರಿ ಹೊಂದಲಾಗಿದೆ.

ವಿಜಯನಗರ ಜಿಲ್ಲೆಯಲ್ಲಿ 2024–25ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಸಹಾಯಧನದಲ್ಲಿ ಭತ್ತ, ಜೋಳ, ರಾಗಿ, ಮೆಕ್ಕೆಜೋಳ, ಸಜ್ಜೆ, ತೊಗರಿ, ಉದ್ದು, ಹೆಸರು, ಅಲಸಂದಿ, ನೆಲಗಡಲೆ, ಸೂರ್ಯಕಾಂತಿ ಮತ್ತು ಸೋಯಾಅವರೆಯ ಬಿತ್ತನೆ ಬೀಜಗಳನ್ನು ವಿತರಿಸಲು ಹಡಗಲಿ ತಾಲೂಕನಲ್ಲಿ 3585, ಹಗರಿಬೊಮ್ಮನಹಳ್ಳಿ ತಾಲೂಕಿನಲ್ಲಿ 3051, ಹರಪನಹಳ್ಳಿ ತಾಲೂಕಿನಲ್ಲಿ 2366, ಹೊಸಪೇಟೆ ತಾಲೂಕಿನಲ್ಲಿ 1702 ಹಾಗೂ ಕೊಟ್ಟುರ ತಾಲೂಕಿನಲ್ಲಿ 2754 ಮತ್ತು ಕೂಡ್ಲಿಗಿ ತಾಲೂಕಿನಲ್ಲಿ 5063 ಕ್ವಿಂಟಲ್ ಪ್ರಮಾಣದಷ್ಟು ತಾಲೂಕುವಾರು ಬಿತ್ತನೆ ಬೀಜಗಳ ಬೇಡಿಕೆ ಇರುತ್ತದೆ.

2024–25ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ವಿಜಯನಗರ ಜಿಲ್ಲೆಯಲ್ಲಿ ಯೂರಿಯಾ 13,552.6 ಮೆ.ಟನ್, ಡಿಎಪಿ 3505.9 ಮೆ.ಟನ್, ಎಂಓಪಿ 707.7, ಎನ್‌ಪಿಕೆ 12,777.0 ಮೆ.ಟನ್, ಎಸ್‌ಎಸ್‌ಪಿ 152.8 ಮೆ.ಟನ್ ರಷ್ಟು ವಿವಿಧ ರಸಗೊಬ್ಬರ ದಾಸ್ತಾನು ಇರುತ್ತದೆ ಎಂದು ಕೃಷಿ ಇಲಾಖೆಯ ಜಂಟಿ ನಿರ್ದೇಶಕರು ಸಭೆಗೆ ಮಾಹಿತಿ ನೀಡಿದರು.

ಮೇ 28 ಕೊನೆಗೊಂಡಂತೆ ಕೂಡ್ಲಿಗಿ ತಾಲೂಕಿನಲ್ಲಿ 5850 ಮೆ.ಟನ್, ಕೊಟ್ಟೂರ ತಾಲೂಕಿನಲ್ಲಿ 4816 ಮೆಟ್ರಿಕ್ ಟನ್, ಹರಪನಹಳ್ಳಿ ತಾಲೂಕಿನಲ್ಲಿ 33,009 ಮೆಟ್ರಿಕ್ ಟನ್, ಹೊಸಪೇಟೆ ತಾಲೂಕಿನಲ್ಲಿ 29,223 ಮೆಟ್ರಿಕ್ ಟನ್, ಹಡಗಲಿ ತಾಲೂಕಿನಲ್ಲಿ 1,07,612 ಮೆಟ್ರಿಕ್ ಟನ್ ಮತ್ತು ಹಗರಿಬೊಮ್ಮನಹಳ್ಳಿ ತಾಲೂಕಿನಲ್ಲಿ 9,316 ಮೆಟ್ರಿಕ್ ಟನ್ ಸೇರಿ ಒಟ್ಟು ವಿಜಯನಗರ ಜಿಲ್ಲೆಯಲ್ಲಿ 1,89,826 ಮೆಟ್ರಿಕ್ ಟನ್ ಮೇವು ಲಭ್ಯತೆ ಇದ್ದು, ಜಿಲ್ಲೆಯಲ್ಲಿ ಮೇವಿನ ಕೊರತೆ ಇಲ್ಲ. ವಿಜಯನಗರ ಜಿಲ್ಲೆಗೆ ನೀಡಿದ ಒಟ್ಟು 10,844 ಮಿನಿ ಮೇವಿನ ಕಿಟ್‌ಗಳ ಪೈಕಿ ಈಗಾಗಲೇ 3458 ಮೇವಿ ಮಿನಿ ಕಿಟ್‌ಗಳನ್ನು ವಿತರಿಸಲಾಗಿದೆ ಎಂದು ಪಶುಪಾಲನಾ ಇಲಾಖೆಯ ಉಪ ನಿರ್ದೇಶಕರು ಸಭೆಗೆ ಮಾಹಿತಿ ನೀಡಿದರು.

### ಕುಡಿಯುವ ನೀರು ಸರಬರಾಜು ಸ್ಥಿತಿಗತಿ:

ಕೂಡ್ಲಿಗಿ ತಾಲೂಕಿನಲ್ಲಿ 17, ಕೊಟ್ಟೂರ ತಾಲೂಕಿನಲ್ಲಿ 7, ಹರಪನಹಳ್ಳಿ ತಾಲೂಕಿನಲ್ಲಿ 29, ಹೊಸಪೇಟೆ ತಾಲೂಕಿನಲ್ಲಿ 8, ಹಡಗಲಿ ತಾಲೂಕಿನಲ್ಲಿ 12 ಮತ್ತು ಹಗರಿಬೊಮ್ಮನಹಳ್ಳಿ ತಾಲೂಕಿನಲ್ಲಿ 18 ಸೇರಿ ಒಟ್ಟು 91 ಗ್ರಾಮ ಪಂಚಾಯತಗಳ ವ್ಯಾಪ್ತಿಯಲ್ಲಿನ ಒಟ್ಟು 196 ಹಳ್ಳಿಗಳಲ್ಲಿ ಖಾಸಗಿ ಬೋರವೆಲ್‌ಗಳ ಮೂಲಕ ಕುಡಿಯುವ ನೀರಿನ ಸರಬರಾಜು ಮಾಡಲಾಗುತ್ತಿದೆ. ಮಳೆ ಕೊರತೆ ಮುಂದುವರೆದಲ್ಲಿ ಮುಂಬರುವ ತಿಂಗಳುಗಳಲ್ಲಿ ಕುಡಿಯುವ ನೀರಿಗೆ ತೊಂದೆಯಾಗಬಹುದೆಂದು ಹೊಸಪೇಟೆ ತಾಲೂಕಿನಲ್ಲಿ 30, ಹಡಗಲಿಯಲ್ಲಿ 50, ಹಗರಿಬೊಮ್ಮನಹಳ್ಳಿಯಲ್ಲಿ 43, ಹರಪನಹಳ್ಳಿಯಲ್ಲಿ 128, ಕೊಟ್ಟೂರನಲ್ಲಿ 21 ಹಾಗು ಕೂಡ್ಲಿಗಿಯಲ್ಲಿ 61 ಗ್ರಾಮಗಳು ಸೇರಿ ಒಟ್ಟು 333 ಗ್ರಾಮಗಳಲ್ಲಿ ಮತ್ತು ಹೊಸಪೇಟೆಯ 15 ವಾರ್ಡ ಮತ್ತು ಹರಪನಹಳ್ಳಿಯ 27 ವಾರ್ಡಗಳು ಸೇರಿ ಒಟ್ಟು 46 ವಾರ್ಡಗಳನ್ನು ಗುರುತಿಸಲಾಗಿದೆ. ಕುಡಿಯುವ ನೀರು ಕೊರತೆ ಆಗಬಹುದಾದ ಗ್ರಾಮಗಳು ಮತ್ತು ವಾರ್ಡಗಳಲ್ಲಿ ಒಪ್ಪಂದಕ್ಕಾಗಿ ಹೆಚ್ಚಿನ ಇಳುವರಿ ನೀಡುವ 602 ಬೋರವೆಲ್‌ಗಳನ್ನು ಈಗಾಗಲೇ ಗುರುತಿಸಿದ್ದು, ಈ ಪೈಕಿ ಈಗಾಗಲೇ 485 ಬೋರವೆಲ್‌ಗಳೊಂದಿಗೆ ಮುಂಗಡ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

**ಅಧಿಕಾರಿಗಳಿಗೆ ನಿರ್ದೇಶನ:** ಈ ವೇಳೆ ಜಿಲ್ಲಾಧಿಕಾರಿಗಳು ಮಾತನಾಡಿ, ವಿಜಯನಗರ ಜಿಲ್ಲೆಯಲ್ಲಿ 2024–25ನೇ ಸಾಲಿನಲ್ಲಿ ಮುಂಗಾರು ಹಂಗಾಮಿನ ಬೆಳೆವಾರು ತಾಲೂಕುವಾರು ಬಿತ್ತನೆ ಪ್ರಗತಿಯು ನಿಗದಿಪಡಿಸಿದ ಗುರಿಯನುಸಾರ ಆಗಬೇಕು. ಈ ನಿಟ್ಟಿನಲ್ಲಿ ವಿಶೇಷವಾಗಿ ಕೃಷಿ ಇಲಾಖೆಯ ಅಧಿಕಾರಿಗಳು ಮುತುವರ್ಜಿ ವಹಿಸಿ ಕಾರ್ಯ ನಿರ್ವಹಿಸಬೇಕು. 2024–25ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ರಿಯಾಯಿತಿಯಲ್ಲಿ ಬಿತ್ತನ ಬೀಜ ಹಾಗೂ ಗೊಬ್ಬರ ದಾಸ್ತಾನು ಇರುವ ಬಗ್ಗೆ ರೈತರಿಗೆ ಮಾಹಿತಿಗಾಗಿ ರೈತ ಸಂಪರ್ಕ ಕೇಂದ್ರ, ಗ್ರಾಮ ಪಂಚಾಯತ್‌ಗಳಲ್ಲಿ ಫಲಕಗಳನ್ನು ಹಾಕಲು ಕ್ರಮ ವಹಿಸಬೇಕು ಎಂದು ಕೃಷಿ ಇಲಾಖೆಯ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು. ಪೂರ್ವ ಮುಂಗಾರು ಮಳೆಗಳು ಈಗಾಗಲೇ ಆರಂಭವಾಗಿವೆ. ಮೇ 1 ರಿಂದ ಮೇ 22ರವರೆಗೆ ವಿವಿಧ ತಾಲೂಕುಗಳು ಸೇರಿದಂತೆ ವಿಜಯನಗರ ಜಿಲ್ಲೆಯಲ್ಲಿ ವಾಡಿಕೆ ಮಳೆ 39 ಮಿಮಿ ಇದ್ದು, ವಾಸ್ತವಿಕವಾಗಿ 75 ಮಿಮಿ ಉತ್ತಮ ಮಳೆಯಾಗಿದೆ. ಮುಂಗಾರು ಮಳೆಗಳು ಆರಂಭಗೊಂಡ ಹಿನ್ನೆಲೆಯಲ್ಲಿ ಜನ ಜಾನುವಾರು ಸುರಕ್ಷತೆ ದೃಷ್ಟಿಯಿಂದ ಅಧಿಕಾರಿಗಳು ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

**ಗ್ರಾಮಮಟ್ಟದ ಅಧಿಕಾರಿಗಳಿಗೆ ಸೂಚನೆ:** ವಿಜಯನಗರ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಉತ್ತಮ ರೀತಿಯಲ್ಲಿ ಮಳೆ ಸುರಿದಿದೆ. ವಿಜಯನಗರ ಜಿಲ್ಲೆಯ ಎಲ್ಲಾ ತಾಲೂಕಿನ ಗ್ರಾಮಗಳಲ್ಲಿ ಯಾವುದೇ ಕಡೆಗಳಲ್ಲಿ ನೀರು ನಿಲ್ಲದಂತೆ ತಗ್ಗು ಪ್ರದೇಶವನ್ನು ಸಮತಟ್ಟುಗೊಳಿಸಬೇಕು. ನೀರು ನಿಲ್ಲದೇ ಸರಾಗವಾಗಿ ಹರಿದುಹೋಗುವಂತೆ ಗಟಾರು ದುರಸ್ತಿಗೆ ಗಮನ ಹರಿಸಬೇಕು. ಸೊಳ್ಳೆಗಳು ಉತ್ಪತ್ತಿಯಾಗದಂತೆ ಆರೋಗ್ಯ ಇಲಾಖೆಯ ಸಹಕಾರದೊಂದಿಗೆ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಸದಾಶಿವ ಪ್ರಭು ಬಿ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿಗಳಾದ ಅನುರಾಧ ಜಿ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು.

# ಹುಲಿಗೆಮ್ಮ ದೇವಿ ಜಾತ್ರೆ ಪ್ರಾಣಿ ಬಲಿ ನಿಷೇಧಿಸಿ ತಹಶೀಲ್ದಾರ ಆದೇಶ



**ಹಂಪಿ ಟೈಮ್ಸ್ ಕೊಪ್ಪಳ**

ಕೊಪ್ಪಳ ತಾಲ್ಲೂಕಿನ ಹುಲಿಗಿ ಗ್ರಾಮದಲ್ಲಿ ಮೇ 30 ರಿಂದ ಜೂನ್ 03 ರವರೆಗೆ ನಡೆಯಲಿರುವ ಶ್ರೀ ಹುಲಿಗೆಮ್ಮ ದೇವಿ ದೇವಸ್ಥಾನದ 2024ನೇ ಸಾಲಿನ ವಾರ್ಷಿಕ ಜಾತ್ರೆಯಲ್ಲಿ ಪ್ರಾಣಿ ಬಲಿಯನ್ನು ನಿಷೇಧಿಸಿ ಕೊಪ್ಪಳ ತಹಶೀಲ್ದಾರರು ಹಾಗೂ ತಾಲ್ಲೂಕು ಕಾರ್ಯನಿರ್ವಾಹಕ ದಂಡಾಧಿಕಾರಿಗಳಾದ ವಿಠ್ಠಲ್ ಚೌಗಲಾ ಅವರು ಆದೇಶ ಹೊರಡಿಸಿದ್ದಾರೆ.

ದೇವಸ್ಥಾನದ ಆವರಣದಲ್ಲಿ ಹಾಗೂ ದೇವಸ್ಥಾನಕ್ಕೆ ಸಂಬಂಧಪಟ್ಟ ಜಮೀನುಗಳಲ್ಲಿ ಕರ್ನಾಟಕ ಪ್ರಾಣಿ ನಿಷೇಧ ಕಾಯ್ದೆ 1959 ಮತ್ತು ಕರ್ನಾಟಕ ಪ್ರಾಣಿ ಬಲಿ ನಿಷೇಧ ನಿಯಮಗಳು 1963 ರ ರೀತ್ಯಾ ಭಕ್ತಾದಿಗಳು, ಸಾರ್ವಜನಿಕರು ದೇವರ ಹೆಸರಿನಲ್ಲಿ ಯಾವುದೇ ರೀತಿಯ ಪ್ರಾಣಿ ಬಲಿ ನೀಡುವುದನ್ನು ನಿಷೇಧಿಸಿದೆ ಎಂದು ತಹಶೀಲ್ದಾರರು ಆದೇಶದಲ್ಲಿ ತಿಳಿಸಿದ್ದಾರೆ.

# ರಾಷ್ಟ್ರೀಯ ಸಾಗರೋತ್ತರ ವಿದ್ಯಾರ್ಥಿವೇತನ ಯೋಜನೆಯ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**

ಕೇಂದ್ರ ಸರ್ಕಾರದ ಬುಡಕಟ್ಟು ವ್ಯವಹಾರಗಳ ಸಚಿವಾಲಯವು 2024–25 ನೇ ಸಾಲಿಗೆ ರಾಷ್ಟ್ರೀಯ ಸಾಗರೋತ್ತರ ವಿದ್ಯಾರ್ಥಿವೇತನ ಯೋಜನೆಯಡಿ (ಎನ್‌ಒಎಸ್) ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ವಿದ್ಯಾರ್ಥಿವೇತನಕ್ಕೆ ಸ್ನಾತಕೋತ್ತರ ಪದವಿ, ಪಿಹೆಚ್‌ಡಿ ಮತ್ತು ಉನ್ನತ ವ್ಯಾಸಂಗಕ್ಕೆ ಆಯ್ಕೆಯಾದ ಅಭ್ಯರ್ಥಿಗಳು ಅರ್ಹರಾಗಿರುತ್ತಾರೆ. ಆಸಕ್ತ ಅಭ್ಯರ್ಥಿಗಳು https://overseas.tribal.gov.in ವೆಬ್‌ಸೈಟ್‌ಗೆ ಭೇಟಿ ನೀಡಿ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಮೇ 31 ಕೊನೆಯ ದಿನವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ನಗರದ ನಲ್ಲಚೇರುವು ಪ್ರದೇಶದ ವಾಲ್ಮೀಕಿ ಭವನದ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿ ಅಥವಾ ದೂ.08392–242453 ಗೆ ಸಂಪರ್ಕಿಸಬಹುದು ಎಂದು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ದಿವಾಕರ ತಿಳಿಸಿದ್ದಾರೆ.

## ವಿಜ್ಞಾನ

# ಮಂಜುಗಡ್ಡೆ(ಐಸ್) ಯಾಕೆ ಜಾರುತ್ತದೆ?

■ **ಆರ್.ಬಿ.ಗುರುಬಸವರಾಜ**

ನಂದಿಶನು ಐಸ್ ಕ್ಯಾಂಡಿಯನ್ನು ತಿನ್ನುತ್ತಿದ್ದ. ಕೈಯಲ್ಲಿದ್ದ ಐಸ್ ಕ್ಯಾಂಡಿ ಜಾರಿ ಕೆಳಗೆ ಬಿತ್ತು. ಅಳತೊಡಗಿದ. ತಾಯಿ ಅವನನ್ನು ಸಮಾದಾನ ಮಾಡಿ ಇನ್ನೊಂದು ಐಸ್ ಕೊಡಿಸಿದಳು. ಇದನ್ನು ನೋಡಿದ ವೀರೇಂದ್ರ "ಅಮ್ಮಾ ಐಸ್ ಏಕೆ ಜಾರುತ್ತದೆ?" ಎಂದ. ಅದಕ್ಕೆ ತಾಯಿ ಹೀಗೆ ಉತ್ತರಿಸಿದಳು.

ಮಂಜುಗಡ್ಡೆಯು ನೀರಿನ ಘನರೂಪವಾಗಿದೆ. ದ್ರವ್ಯದ ಮೂರು ಸ್ಥಿತಿಗಳನ್ನು ಹೊಂದಿದ ವಸ್ತು ಎಂದರೆ ನೀರು. ಸಾಮಾನ್ಯವಾಗಿ ನೀರು ಉತ್ತಮ ಲೂಬ್ರಿಕಂಟ್ ಅಲ್ಲ. ಆದಾಗ್ಯೂ ಅದರಿಂದ ಉಂಟಾದ ಮಂಜುಗಡ್ಡೆಯ ಮೇಲಿನ ತೆಳುವಾದ ಪದರವು ಯಾಕೆ ಜಾರುತ್ತದೆ ಎಂಬ ಪ್ರಶ್ನೆಯನ್ನು ಹುಟ್ಟುಹಾಕುತ್ತದೆ. ಮಂಜುಗಡ್ಡೆ ಅಥವಾ ಐಸ್ ನಮ್ಮ ಸಂಪರ್ಕಕ್ಕೆ ಬಂದಾಗ ಅದರ ಮೇಲ್ಮೈಯಲ್ಲಿನ ದ್ರವರೂಪದ ನೀರಿನ ತೆಳುವಾದ ಪದರದ ಕಾರಣದಿಂದ ಜಾರುತ್ತದೆ. ನೀವು ಮಂಜುಗಡ್ಡೆಯ ಮೇಲೆ ಹೆಜ್ಜೆ ಹಾಕಿದಾಗ ಅಥವಾ ಅದರ ಮೇಲೆ ನಡೆಯಲು ಪ್ರಯತ್ನಿಸಿದಾಗ, ನೀವು ಅದರ ಮೇಲೆ ಹಾಕುವ ಒತ್ತಡವು ಮಂಜುಗಡ್ಡೆಯನ್ನು ಸ್ವಲ್ಪಮಟ್ಟಿಗೆ ಕರಗಿಸುತ್ತದೆ. ಅದರ ಮೇಲ್ಮೈಯಲ್ಲಿ ದ್ರವದ ನೀರಿನ ತೆಳುವಾದ ಪದರವನ್ನು ರಚಿಸುತ್ತದೆ. ಈ ತೆಳುವಾದ ನೀರಿನ ಪದರವು ಲೂಬ್ರಿಕಂಟ್ ಆಗಿ ಕಾರ್ಯನಿರ್ವಹಿಸುತ್ತದೆ ಮತ್ತು ಮೇಲ್ಮೈಯನ್ನು ಜಾರುವಂತೆ ಮಾಡುತ್ತದೆ.



ಮಂಜುಗಡ್ಡೆಯಲ್ಲಿರುವ ಅಣುಗಳು ಜಾಲರಿಯಲ್ಲಿ ಜೋಡಿಸಲ್ಪಟ್ಟಿರುವುದರಿಂದ, ಅವುಗಳ ನಡುವೆ ತೆರೆದ ಸ್ಥಳಗಳಿವೆ. ಮಂಜುಗಡ್ಡೆಗೆ ಒತ್ತಡವನ್ನು ಹಾಕಿದಾಗ, ಅಣುಗಳು ಸಂಕುಚಿತಗೊಳ್ಳುತ್ತವೆ ಮತ್ತು ಅವುಗಳ ನಡುವಿನ ಕೆಲವು ಬಂಧಗಳು ಮುರಿದುಹೋಗುತ್ತವೆ. ಇದರಿಂದ ಮಂಜುಗಡ್ಡೆಯಲ್ಲಿ ಸಣ್ಣ ಬಿರುಕುಗಳು ಉಂಟಾಗುತ್ತವೆ. ಈ ಬಿರುಕುಗಳು ಸುತ್ತಮುತ್ತಲಿನ ಪರಿಸರದಿಂದ ದ್ರವ ನೀರಿನಿಂದ ತುಂಬಿರುತ್ತವೆ. ಒತ್ತಡ ಮುಕ್ತವಾದಾಗ ಅದು ಮತ್ತೆ ಹೆಪ್ಪುಗಟ್ಟುತ್ತದೆ ಮತ್ತು ನಯವಾದ ಮೇಲ್ಮೈಯನ್ನು ರಚಿಸುತ್ತದೆ. ಆದ್ದರಿಂದ ಒತ್ತಡದಿಂದಾಗಿ ಮಂಜುಗಡ್ಡೆಯ ಮೇಲ್ಮೈಯಲ್ಲಿ ರೂಪುಗೊಳ್ಳುವ ದ್ರವ ನೀರಿನ ತೆಳುವಾದ ಪದರ ಮತ್ತು ಅದರ ವಿಶಿಷ್ಟ ಸ್ಫಟಿಕದ ರಚನೆಯು ಮಂಜುಗಡ್ಡೆ/ಐಸ್ ಅನ್ನು ಜಾರುವಂತೆ ಮಾಡುತ್ತದೆ. ತಾಪಮಾನವು ಘನೀಕರಣಕ್ಕಿಂತ ಕಡಿಮೆ ಇದ್ದಾಗಲೂ ಮಂಜುಗಡ್ಡೆಯು ಜಾರುತ್ತದೆ. ಏಕೆಂದರೆ ನಿಮ್ಮ ತೂಕ ಅಥವಾ ಚಲನೆಯ ಒತ್ತಡವು ಮಂಜುಗಡ್ಡೆಯ ಮೇಲೆ ದ್ರವದ ನೀರಿನ ಪದರವನ್ನು ರಚಿಸಬಹುದು.

ಸಾಮಾನ್ಯವಾಗಿ ಮಂಜುಗಡ್ಡೆಯ ತಾಪಮಾನ ಕಡಿಮೆ ಇರುತ್ತದೆ. ತನ್ನ ತಾಪಮಾನಕ್ಕಿಂತ ಬೆಚ್ಚಗಿರುವ ವಸ್ತುಗಳು ಅಥವಾ ಮೇಲ್ಮೈಗಳ ಸಂಪರ್ಕಕ್ಕೆ ಬಂದಾಗ ಮಂಜುಗಡ್ಡೆ ಮೇಲ್ಮೈಯಲ್ಲಿ ರೂಪುಗೊಳ್ಳುವ ದ್ರವದ ನೀರಿನ ತೆಳುವಾದ ಪದರದಿಂದಾಗಿ ಐಸ್ ಜಾರುತ್ತದೆ. ದ್ರವದ ನೀರಿನ ಈ ತೆಳುವಾದ ಪದರವು ವಸ್ತು ಅಥವಾ ಮೇಲ್ಮೈ ಮತ್ತು ಮಂಜುಗಡ್ಡೆಯ ನಡುವಿನ ಘರ್ಷಣೆಯನ್ನು ಕಡಿಮೆ ಮಾಡುತ್ತದೆ. ಹೀಗಾಗಿ ವಸ್ತುವು ಮಂಜುಗಡ್ಡೆಯ ಮೇಲ್ಮೈಯಲ್ಲಿ ಜಾರುತ್ತದೆ.

# ಬೆಂಬಲ ಬೆಲೆಗೆ ನೋಂದಾಯಿಸಿದ ರೈತರು ರಾಗಿ ಮಾರಾಟಕ್ಕೆ ತನ್ನಿ

## ಎಪಿಎಂಸಿ ಕಾರ್ಯದರ್ಶಿ ವೀರಣ್ಣ ಸೂಚನೆ



■ **ಹಂಪಿ ಟೈಮ್ಸ್ ಕೊಟ್ಟೂರು**

ಪ್ರಸ್ತುತ ವರ್ಷ ಬೆಂಬಲ ಬೆಲೆಗೆ ಈಗಾಗಲೇ ನೊಂದಾವಣೆ ಮಾಡಿಕೊಂಡಿರುವ ತಾಲೂಕಿನ ರೈತರು ವಿಳಂಬ ಮಾಡದೆ ಶೀಘ್ರ ರಾಗಿ ಖರೀದಿ ಕೇಂದ್ರಕ್ಕೆ ತಮ್ಮ ರಾಗಿಯನ್ನು ತಂದು ಮಾರಾಟಕ್ಕೆ ಮುಂದಾಗಬೇಕು ಎಂದು ಕೊಟ್ಟೂರು ಎಪಿಎಂಸಿ ಕಾರ್ಯದರ್ಶಿ ವೀರಣ್ಣ ಅವರು ಹೇಳಿದರು. ರಾಗಿ ಖರೀದಿ ಕೇಂದ್ರದ ಬಳಿ ರೈತರ ಸಂಖ್ಯೆ ಕಡಿಮೆ ಇರುವುದನ್ನು ಅವಲೋಕಿಸಿ ವಿಚಾರಿಸಿದ ವೇಳೆ. ಇಲ್ಲಿನ ಖರೀದಿ ಕೇಂದ್ರದಲ್ಲಿ ಸಧ್ರಿ ಅವದಿಗೆ ತಾಲೂಕಿನ 1273 ರೈತರು ನೊಂದಣಿ ಮಂಡಿಸಿದ್ದು, ಮಾರ್ಚ್–21 ಪ್ರಾರಂಭ ದಿನದಿಂದ ಮೇ–22 ರವರೆಗೆ ಒಟ್ಟು 964 ರೈತರು ಮಾರಾಟ ಮಾಡಿದ್ದಾರೆ ಇನ್ನೂ 309 ರೈತರು ಬಾಕಿ ಇದ್ದಾರೆ ಎಂದು ಮಾಹಿತಿ ನೀಡಿದರು.

ಪ್ರಸ್ತುತ ಖರೀದಿ ಕೇಂದ್ರ ಖಾಲಿ ಇದ್ದು,ರಾಗಿ ಕೊಂಡೊಯ್ಯಲು ಬರುವ ಲಾರಿಗಳು ಖಾಲಿ ನಿಲ್ಲುತ್ತಿವೆ ಹಾಗಾಗಿ ಬಾಕಿ ಇರುವ 309 ರೈತರು ,ಶೀಘ್ರ ತಮ್ಮ ನೊಂದಣಿ ಮಾಡಿದ ರಾಗಿಯನ್ನು ಖರೀದಿ ಕೇಂದ್ರಕ್ಕೆ ತಂದು.ಮಾರಾಟ ಮಾಡಬೇಕೆಂದು ಪತ್ರಿಕೆ ಮೂಲಕ ಅವರು ತಿಳಿಸಿದರು. ಈ ವೇಳೆ ರಾಗಿ ಕೇಂದ್ರದ ನೊಂದಣಿ ಅಧಿಕಾರಿ ಚಿದಾನಂದ, ರಾಗಿ ಗ್ರೇಡ್ ತಪಾಸಣೆ ಅಧಿಕಾರಿ ಶಿವಕುಮಾರ್ ಹಾಗೂ ರಾಗಿ ಮಾರಾಟಕ್ಕೆ ತಂದ ರೈತರು ,ಅಮಾಲರು ಇದ್ದರು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA